ಜನಪದಸೇವಾಟ್ರಸ್ಟ್‌ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಸಂಪುಟ-೫ ಅಕ್ಟೋಬರ್-೨೦೦೪ ಸಂಚಿಕೆ-೩



ತಂದಿದ್ದೇನೆ ಸತ್ಯಾಗ್ರಹದ ಕಾಣಿಕೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಅಕ್ಟೋಬರ್–೨೦೦೪
ಸಂಪುಟ ೫
ಸಂಚಿಕೆ ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆(08236)298754
e-mail - janapada@yahoo.com

ಗಾಂಧೀ ಮೇಲಣಪ್ರೀತಿ

ಮಹಾತ್ಮರೆಂದಲ್ಲ.
ಅವರು ಮನುಷ್ಯರಾಗಿದ್ದು
ಗುಬ್ಬಚ್ಚಿಯಾಗಿ ಗೂಡು ಕಟ್ಟಿದ್ದಕ್ಕೆ
ನಾನು ಪ್ರೀತಿಸುತ್ತೇನೆ:
ಪಿತಾಮಹರೆಂದಲ್ಲ.
ಇಡೀ ದೇಹ
ಮುಪ್ಪು ಮುಪ್ಪಾಗಿದ್ದರೂ
ಉಪ್ಪಿನ ಮಹಾಸಾಗರದಿಂದ
ಮರಳು ದಂಡೆಯನ್ನು ದಾಟಿದ
ಒಂಟಿ ಕೋಲಿನ ಗುರುತುಗಳಿಗಾಗಿ
ನಾನು ಪ್ರೀತಿಸಿದ್ದು
'ಬಾಪೂಜಿ' ಎಂದು
ಬಾಯಿತುಂಬಿಕೊಂಡಿದ್ದು
ಗುಣಗಾನಕ್ಕಲ್ಲ:
ಗೌರವಕ್ಕಾಗಿ.
ಆಫ್ರಿಕಾದಲ್ಲಿ ಇಂಡಿಯಾದಲ್ಲಿ
ಮಾಂಸ ಖಂಡ ರಕ್ತನಾಳಗಳನ್ನು
ಒಂದಾಗಸಿ ಉಸಿರಾಡಿದ್ದಕ್ಕೆ
ಮೋಹನದಾಸ ಕರಮಚಂದ
ಗಾಂಧಿಯನ್ನು ಪ್ರೀತಿಸಿದ್ದು ನಾಡಿನ
ಸತ್ಯಹರಿಶ್ಚಂದ್ರ ನೋಡಿ ಅತ್ತಿದ್ದಕ್ಕೆ.

–ಸುಬ್ಬು ಹೊಲೆಯಾರ್
(ಸುಧಾ ಸಾಭರ)

ವಿಚಾರ ದೀಪ್ತಿ

ಗಾಂಧೀ ಕಂಡ ಸತ್ಯ

ಗಾಂಧೀ ಸಂತಗುಣವನ್ನು ಹೊಂದಿರುವುದರಿಂದ ಅವರು ಆಧ್ಯಾತ್ಮ ಲೋಕದಲ್ಲಿ ಇರಬೇಕೆಂಬುದು ಸೂಫಿ ಸಂತರೊಬ್ಬರ ಆಶಯವಾಗಿತ್ತು. ಗಾಂಧೀಯವರಿಗೆ ಈ ಕುರಿತು ಮನವರಿಕೆ ಮಾಡುವ ಉದ್ದೇಶದಿಂದ ಅವರು ಗಾಂಧೀ ಇದ್ದಲ್ಲಿಗೆ ಹೋದರು. ಆಗ ಗಾಂಧೀಯವರ ಆರೋಗ್ಯ ಹದಗೆಟ್ಟಿತ್ತು. ಬೆಂಗಳೂರು ಬಳಿಯ ನಂದಿಬೆಟ್ಟದ ಆರೋಗ್ಯಧಾಮದಲ್ಲಿ ಉಳಿದುಕೊಳ್ಳುವುದಾಗಿಯು ತಾವು ಅಲ್ಲಿಗೆ ಬಂದರೆ ಮಾತನಾಡಬಹುದು ಎಂದು ಗಾಂಧೀ ತಿಳಿಸಿದರು.

ಗಾಂಧೀಯವರು ನಂದಿಬೆಟ್ಟಕ್ಕೆ ಬಂದ ನಂತರ ಆ ಸೂಫಿ ಅಲ್ಲಿ ಹೋದರು. ಆದರೆ ಅವರಿಗೆ ನಿರಾಶೆಯಾಯಿತು. ಏನು ಮಾಡುತ್ತಿದ್ದೀರಿ, ಗಾಂಧೀ ಎಂದು ಬೇಸರದಿಂದ ಕೇಳಿದರು. ಆಗ ಗಾಂಧೀಯವರು 'ಬನ್ನಿ; ಬಾಂಬ್ ತಯಾರಿಸುತ್ತಿದ್ದೇನೆ ಎಂದು ಪ್ರಸನ್ನಚಿತ್ತರಾಗಿ ಹೇಳಿದರು. ಹೌದು ಗಾಂಧೀಯವರು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ನಿರ್ನಾಮ ಮಾಡುವಂಥ ಬಾಂಬ್ ತಯಾರಿಸುತ್ತಿದ್ದರು.

ಆ ಸೂಫಿ ಸಂತ ಬಂದ ಸಂದರ್ಭದಲ್ಲಿ ಗಾಂಧೀಜಿಯವರು ಚರಕ ಹಿಡಿದು ನೂಲು ತೆಗೆಯುತ್ತಿದ್ದರು. ನೂಲು ಸುತ್ತಿಸುತ್ತಿ ಚರಕದ ಉರುಳೆ ಬಾಂಬಿನ ಹಾಗೆ ಕಾಣುತ್ತಿತ್ತು. ಬಡ ರಾಷ್ಟ್ರಗಳು ಸ್ವಾವಲಂಬನೆ ಸಾಧಿಸಲು ಸಹಾಯಕವಾಗುವ ವಸ್ತುಗಳೆಲ್ಲ ಸಾಮ್ರಾಜ್ಯ ಶಾಹಿಗಳಿಗೆ ಬಾಂಬುಗಳ ಹಾಗೆ ಕಾಣುತ್ತವೆ ಎಂಬುದು ಗಾಂಧೀಜಿ ಕಂಡುಕೊಂಡ ಸತ್ಯವಾಗಿತ್ತು.

ಗಾಂಧೀಯವರ ಸ್ವದೇಶಿ ಆಂದೋಲನದಿಂದಾಗಿ ಇಂಗ್ಲೆಂಡಿನ ಮ್ಯಾಂಚೆಸ್ಟರ್, ಯಾರ್ಕ್‌ಷೈರ್ ಕಡೆಗಳಲ್ಲಿನ ಜವಳಿ ಗಿರಣಿಗಳು ಭಾರತದಲ್ಲಿ ಮಾರುಕಟ್ಟೆ ಕಳೆದುಕೊಂಡು ಬಂದಾದವು. ತಮ್ಮ ವಸ್ತುಗಳ ಮಾರಾಟಕ್ಕಾಗಿ ಹೆಚ್ಚು ಹೆಚ್ಚು ಮಾರುಕಟ್ಟೆಗಳು ಸಿಕ್ಕಂತೆಲ್ಲ ಸಾಮ್ರಾಜ್ಯಶಾಹಿಗಳು ಪ್ರಬಲರಾಗುತ್ತ ಹೋಗುತ್ತಾರೆ. ಮಾರುಕಟ್ಟೆಗಳನ್ನು ಕಳೆದುಕೊಂಡಂತೆಲ್ಲ ದುರ್ಬಲರಾಗುತ್ತಾರೆ. ಸಾಮ್ರಾಜ್ಯಶಾಹಿಗಳು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುವ ವಸ್ತುಗಳ ಬೆಲೆಗಳು ಸಹಜವಾಗಿಯೇ ಸ್ಥಳೀಯರು ಉತ್ಪಾದಿಸುವ ವಸ್ತುಗಳ ಬೆಲೆಗಳಿಗಿಂತ ಕಡಿಮೆಯದಾಗಿರುತ್ತವೆ. ಇಂಥ ವಸ್ತುಗಳು ಸಾಮ್ರಾಜ್ಯಶಾಹಿಗಳ ನಿಜವಾದ ಸೈನ್ಯ ಎಂದು ಕಾರ್ಲ್‌ಮಾರ್ಕ್ಸ್ ೧೮೫೮ರಲ್ಲೇ ಹೇಳಿದ್ದಾರೆ.

ಈ ಸೈನ್ಯವನ್ನು ಸೋಲಿಸಬೇಂಕೆದರೆ ಬಡ ರಾಷ್ಟ್ರಗಳು ಸ್ವಾವಲಂಬಿ ಆಗುವುದೊಂದೇ ದಾರಿ. ಗಾಂಧೀಜಿ ಎರಡನೇ ದುಂಡುಮೇಜಿನ ಪರಿಷತ್‌ನಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ಹೋದ ಸಂದರ್ಭದಲ್ಲಿ ಜವಳಿ ಗಿರಣಿಗಳ ಕಾರ್ಮಿಕರ ಸ್ಥಿತಿಗತಿ ತಿಳಿದುಕೊಳ್ಳುವುದಕ್ಕಾಗಿ ಮ್ಯಾಂಚೆಸ್ಟರ್‌ಗೆ ಭೇಟಿ ನೀಡಿದಾಗ, ಜವಳಿ ಗಿರಣಿಗಳು ಬಂದಾಗಿ, ಕಾರ್ಮಿಕರು ಕೆಲಸವಿಲ್ಲದೆ ಅರೆಹೊಟ್ಟೆ ಜೀವನ ಸಾಗಿಸುತ್ತಿದ್ದುದನ್ನು ಕಂಡು ಗಳಗಳನೆ ಅತ್ತರು. ಅಲ್ಲಿನ ಕಾರ್ಮಿಕ ಮಹಿಳೆಯರು ಅವರ ಕಣ್ಣೀರು ಒರೆಸಿ ಮಗುವಿನಂತೆ ಎತ್ತಿಕೊಂಡರು. ನಿಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಾವು ಉಪವಾಸ ಇರಲು ಸಿದ್ಧರಿದ್ದೇವೆ ಎಂದು ಹೇಳಿದರು!

–ಸೂಫಿ ಬಿಜಾಪುರಿ.

ತಂದಿದ್ದೇನೆ ಸತ್ಯಾಗ್ರಹದ ಕಾಣಿಕೆ–ಗಾಂಧೀ

–ಸುರೇಂದ್ರ ಕೌಲಗಿ.

೧೯೪೫ ರಲ್ಲಿ ಅಣುಬಾಂಬ್ ಸಿಡಿಯಿತು. ಅಂದೇ ಜಗತ್ತಿಗೆ ಸತ್ಯಾಗ್ರಹದಂಥ ವಿನೂತನ ಚಿಂತನೆಯ ಅಗತ್ಯವೂ ಉಂಟಾಯಿತು. ಅಣುಬಾಂಬ್ ನಂಥ ವಿನಾಶಕಾರಿ ಅಸ್ತ್ರವನ್ನು ಜಗತ್ತಿಗೆ ಕೊಟ್ಟ ವಿಜ್ಞಾನಿಗಳಲ್ಲಿ ಆಲ್ಬರ್ಟ್ ಐನ್‌ಸ್ಟೈನ್‌ರೂ ಒಬ್ಬರು. ಈ ಅಸ್ತ್ರವನ್ನು ಕಂಡು ಹಿಡಿಯುವ ಮೊದಲು ಎಷ್ಟೋ ವರ್ಷಗಳಿಂದ ಭೌತ ವಿಜ್ಞಾನಿಗಳು, ರಸಾಯನಿಕ ವಿಜ್ಞಾನಿಗಳು ಪ್ರಯೋಗಗಳಲ್ಲಿ ತೊಡಗಿದ್ದರು. ಕೊನೆಗೆ ಈ ಪ್ರಯೋಗಗಳ ಪರಿಣಾಮವಾಗಿ ಅಣುಬಾಂಬ್ ಜನ್ಮವೆತ್ತಿ ಜಪಾನಿನ ಹಿರೊಷಿಮಾ, ನಾಗಾಸಾಕಿ ಪಟ್ಟಣಗಳ ಮೇಲೆ ಬಿದ್ದು ಲಕ್ಷಾಂತರ ಜನರು ಸತ್ತರು ; ಜಗತ್ತು ಹೌಹಾರಿತು; ಅಣುಬಾಂಬ್ ಕಂಡುಹಿಡಿದ ವಿಜ್ಞಾನಿಗಳೇ ಕಣ್ಣೀರಿನ ಪಶ್ಚಾತ್ತಾಪದಲ್ಲಿ ಕೈ ತೊಳೆದುಕೊಂಡರು. ಅಂಥ ವಿಜ್ಞಾನಿಗಳಲ್ಲಿ ಒಬ್ಬರಾಗಿದ್ದ ಐನ್‌ಸ್ಟೈನ್ ಹೀಗೆಂದರು, "ಮಾನವಕುಲ ಉಳಿಯಬೇಕಾದರೆ, ಔನ್ನತ್ಯಕ್ಕೇರಬೇಕಾದರೆ ಹೊಸರೀತಿಯ ಚಿಂತನಾಶೈಲಿಯ ಅಗತ್ಯವಿದೆ." ಐನ್‌ಸ್ಟೈನ್‌ರು ಮಾನವಕುಲದ ಭವಿಷ್ಯದ ಬಗ್ಗೆ ಹೀಗೆ ಹೇಳುವುದಕ್ಕೆ ಮೂವತ್ತೊಂಭತ್ತು ವರ್ಷಗಳ ಮೊದಲೇ ೧೯೦೬ರಲ್ಲಿ ಗಾಂಧೀಜಿ ತಮ್ಮ ಪ್ರಯೋಗಗಳ ಮೂಲಕ ಮಾನವ ಕುಲವನ್ನು ಉಳಿಸುವ ಮತ್ತು ಅದನ್ನು ಔನ್ನತ್ಯಕ್ಕೇರಿಸುವ ಸತ್ಯಾಗ್ರಹವೆಂಬ ಹೊಸರೀತಿಯ ಚಿಂತನಾವಿಧಾನವನ್ನು ಕಂಡುಹಿಡಿದಿದ್ದರು.

ಅಣುಬಾಂಬ್ ಜಗತ್ತಿಗೆ ಕೊಟ್ಟದ್ದು ಜೀವವಿನಾಶಕಾರಿ ಶಸ್ತ್ರಾಸ್ತ್ರಗಳನ್ನು; ಸತ್ಯಾಗ್ರಹ ಕೊಟ್ಟದ್ದು ಜೀವಸಂಕುಲವನ್ನುಳಿಸುವ ಸತ್ಯ–ಪ್ರೇಮ–ಅಹಿಂಸೆ ಎಂಬ ತತ್ವಗಳನ್ನೊಳಗೊಂಡ ಜೀವನ ವಿಧಾನವನ್ನು. ಅಣುಬಾಂಬನ್ನು ಕಂಡುಹಿಡಿದಾಗಿನಿಂದ ಇಂದಿನವರೆಗೆ ಭಯಾನಕ ಮತ್ತು ಅತಿ ವಿಧ್ವಂಸಕಾರಿ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲಿ ದೇಶ ದೇಶಗಳ ಮಧ್ಯೆ ತೀವ್ರತಮ ಪೈಪೋಟಿ ನಡೆದಿದೆ. ಜಗತ್ತಿನ ಪ್ರತಿತೊಂದು ದೇಶದ ವಾರ್ಷಿಕ ಬಜೆಟ್‌ನಲ್ಲಿ ಶೇ ೬೦ರಿಂದ ೮೦ರಷ್ಟು ಹಣ ಶಸ್ತ್ರಾಸ್ತ್ರಗಳ ತಯಾರಿಕೆಗೆ ಮತ್ತು ಸೈನ್ಯ ಶಕ್ತಿ ವರ್ಧನೆಗಾಗಿ ಖರ್ಚಾಗುತ್ತಿದೆ. ವಿಪರ್ಯಾಸವೇನೆಂದರೆ ಅದೇ ದೇಶದ ಶೇ ೮೦ ರಷ್ಟು ಜನರು ಬಡತನ, ಹಸಿವು, ಅಜ್ಞಾನ, ನಿರುದ್ಯೋಗ, ರೋಗ–ರುಜಿನಗಳಿಂದ ಬಳಲುತ್ತಿರುತ್ತಾರೆ. ಇದಕ್ಕೆ ಉದಹರಣೆಯಾಗಿ ಭಾರತ–ಪಾಕಿಸ್ತಾನ, ಮೆಕ್ಸಿಕೋ ಇತ್ಯಾದಿ ದೇಶಗಳಿವೆ. ಅಲ್ಲದೆ ಹಿಂಸಾಚರಣೆಗೆ ಬಲವನ್ನೂ, ಬೆಂಬಲವನ್ನೂ ಕೊಡುವ ಶಸ್ತ್ರಾಸ್ತ್ರಗಳ ಶೋಧನೆ ಅವ್ಯಾಹತವಾಗಿ ಸಾಗಿದೆ. ಇದರ ಪರಿಣಾಮವಾಗಿ ವಿಶ್ವದ ಪ್ರತಿಯೊಂದು ದೇಶದಲ್ಲೂ ಹಿಂಸೆ ಹೆಚ್ಚಾಗುತ್ತಾ ನಡೆದಿದೆ. ಭಯೋತ್ಪಾದಕರೆಂಬ ಹೆಸರಿನಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯ ಹೆಸರಿನಲ್ಲಿ ಧರ್ಮಗಳ ರಕ್ಷಣೆಯ ಹೆಸರಿನಲ್ಲಿ ಇತ್ಯಾದಿ ನೂರು ಬಗೆಯ ಹೆಸರಿನಲ್ಲಿ ನೂರು ಬಗೆಯ ಹಿಂಸೆ ಪ್ರತಿಪಾದಿತವಾಗುತ್ತಿದೆ. ಇನ್ನು ಇದೇ ಜೀವನ ವಿಧಾನವೆನೋ ಎಂಬಷ್ಟರ ಮಟ್ಟಿಗೆ ಹಿಂಸಾಚಾರ ಬೆಳೆದಿದೆ. ಬೆಳೆಯುತ್ತಿರುವ ಹಿಂಸೆಯನ್ನು ತಡೆಯಲು ವಿಶ್ವದ ಎಲ್ಲ ದೇಶಗಳ ಎಲ್ಲ ಸರ್ಕಾರಗಳೂ ವಿಫಲವಾಗಿವೆ.

ಅಷ್ಟೇ ಅಲ್ಲ, ವಿಶ್ವರಾಷ್ಟ್ರ ಸಂಸ್ಥೆಯೂ ಲೀಗ್ ಆಫ್ ನೇಶನ್‌ನ ದಾರಿ ಹಿಡಿದಲ್ಲಿ ಆಶ್ಚರ್ಯವೇನಿಲ್ಲ. ಇಂದು ಯುದ್ಧ ಆಗದಿರುವುದಕ್ಕೆ ಕಾರಣ ದೇಶಗಳು ಹೊಂದಿರಬಹುದಾದ ಶಾಂತಿಪ್ರಿಯತೆಯಾಗಿರದೆ, ಪ್ರತಿಯೊಂದು ದೇಶವೂ ಬೃಹತ್ ಪ್ರಮಾಣದ ಮಾರಕಾಸ್ತ್ರಗಳನ್ನು ಹೊಂದಿರುವುದೆ ಆಗಿದೆ. ಈ ಮಾರಕಾಸ್ತ್ರಗಳೇ ದೇಶಗಳು ಯುದ್ಧದಲ್ಲಿ ತೊಡಗದಿರುವಂತೆ ತಡೆಯೊಡ್ಡಿವೆ. ಭಾರತದ ಅಗ್ನಿಕ್ಷಿಪಣಿ ಪಾಕಿಸ್ತಾನದ ಮೇಲೆ ಹಾರದಂತೆ ಆ ದೇಶದ ಘಜ್ನಿ ಕ್ಷಿಪಣಿ ಕಾರಣವಾಗಿದೆ.

ಎರಡನೇ ಮಹಾಯುದ್ಧದಲ್ಲಿ ಪ್ರಮುಖ ನಾಯಕನಾಗಿದ್ದ ವಿನ್‌ಸ್ಟನ್ ಚರ್ಚಿಲ್ ತನ್ನ ಯುದ್ಧಾನುಭವ ಕುರಿತುಅನೇಕ ಪುಸ್ತಕಗಳನ್ನು ಬರೆದಿದ್ದಾನೆ. ಅವುಗಳಲ್ಲಿ ಒಂದು ಗ್ರಂಥದ ಹೆಸರುTriumph And Tragedy(ವಿಜಯ ಮತ್ತು ದುಃಖಾಂತ) ಈ ಹೆಸರನ್ನಿಡಲು ಕಾರಣವನ್ನು ಸಹ ಕೊಟ್ಟಿದ್ದಾನೆ. "ನಮ್ಮ ಮಹಾನ್ ಮೈತ್ರಿಕೂಟ ಚಿಂತಾಕ್ರಾಂತ ಜಗತ್ತಿಗೆ ಶಾಂತಿಯನ್ನು ತಂದುಕೊಡಲು ವಿಫಲವಾಗಿದೆ." ಇದೇ ಚಿಂತೆ ವಿಶ್ವದ ಎಲ್ಲ ಅಧ್ಯಕ್ಷರ, ಸರ್ವಾಧಿಕಾರಿಗಳ, ಪ್ರಧಾನಮಂತ್ರಿಗಳದೂ ಆಗಿರುವುದರಿಂದ ಮೂರನೇ ವಿಶ್ವಯುದ್ಧವಾಗಿಲ್ಲ. ಆದರೆ ಯುದ್ಧ ಪ್ರಾರಂಭವಾಗಲು ಬೇಕಾದ ಕಾರಣಗಳಂತೂ ಇದ್ದೇ ಇವೆ. ಒಂದು ಯುದ್ಧ ಶಾಂತಿ ಸ್ಥಾಪನೆಗಾಗಿ ಪ್ರಾರಂಭವಾದರೂ ಅದು ಇನ್ನೊಂದು ಯುದ್ಧಕ್ಕೆ ಕಾರಣವಾಗುತ್ತದೆಂಬ ಮಾತು ಜನಜನಿತವಾಗಿದೆ.

ಇಂಥ ವಿಷಚಕ್ರದಲ್ಲಿ ಸುತ್ತುತ್ತಿರುವ ಜಗತ್ತನ್ನು ಬಿಡುಗಡೆಮಾಡುವ ಉಪಾಯ ಅಣುಬಾಂಬ್ ಆಗಿರದೆ ಸತ್ಯಾಗ್ರಹವೇ ಆಗಿದೆ ಅಥವಾ ಆಗಲು ಸಾಧ್ಯವಿದೆ ಎಂಬ ಜ್ಞಾನೋದಯ ವಿಜ್ಞಾನಿಗಳಿಂದ ಹಿಡಿದು, ತಂತ್ರಜ್ಞಾನಿಗಳಿಂದ ಹಿಡಿದು, ರಾಜಕೀಯ ಮುತ್ಸದ್ದಿಗಳಿಂದ ಹಿಡಿದು, ಮೇಧಾವಿ ಅರ್ಥಶಾಸ್ತ್ರಜ್ಞರಿಂದ ಹಿಡಿದು, ಈಗ ರಾಸಾಯನಿಕ ಕೃಷಿಯನ್ನು ಬಿಟ್ಟು ಸಾವಯವ ಕೃಷಿಯತ್ತ ಹೊರಳುತ್ತಿರುವ ಸಾಮಾನ್ಯ ರೈತನಿಂದ ಹಿಡಿದು, ಮಹಿಳಾ ಸ್ವಸಹಾಯ ಗುಂಪಿನ ಅಧ್ಯಕ್ಷರವರೆಗೆ ಆಗುತ್ತಿದೆ.

ಅಣುಬಾಂಬಿನ ಉಪಯೋಗ ವರ್ಷವಾದ ೧೯೪೫ರಿಂದ ವಿಶ್ವದ ಆಲೋಚನ ರೀತಿಯೇ ಬದಲಾಯಿತು. ಅದರ ಅಭಿವೃದ್ಧಿ ನೀತಿಯೇ ಬದಲಾಯಿತು. ಅದರ ಜೀವನ ದೃಷ್ಟಿಕೋನವೇ ಮಾರ್ಪಾಡುಗೊಂಡಿತು. ಶಾಂತಿಯ ಬದಲು ಅಶಾಂತಿ; ಸಹಜೀವನದ ಬದಲು ಪೈಪೋಟಿ, ಸಮಪಾಲಿನ ಬದಲು ಶೋಷಣೆ, ಸಕಲರ ವೃದ್ಧಿಗೆ ಬದಲಾಗಿ ಕೆಲವರ ಉನ್ನತಿ, ನಿಧಾನಗತಿಯ ಬದಲು ವೇಗಗತಿ, ಪರಿಮಿತಿಯ ಬದಲು ಅಪರಿಮಿತಿ, ನಂಬಿಕೆಯ ಬದಲು ಅಪನಂಬಿಕೆ ಹೀಗೆ ಸಾಗುತ್ತಾ ಬಂತು ೧೯೪೫ರೋತ್ತರ ಪ್ರಪಂಚ!

೧೯೪೫ ರಲ್ಲಿ ಆದ ಅಣು ಬಾಂಬ್ ಸ್ಫೋಟನೆಗೆ ಮೂವತ್ತೊಂಭತ್ತು ವರ್ಷಗಳ ಮೊದಲು ಗಾಂಧೀಜಿ ಮೇಲೆ ಹೇಳಿದ ವಿಚಾರಗಳಿಗೆ ಭಿನ್ನವಾದ ತಮ್ಮ ಸತ್ಯಾಗ್ರಹ ವಿಚಾರವನ್ನು ಬಹಿರಂಗಗೊಳಿಸುವುದರ ಮೂಲಕ ಆಸ್ಫೋಟಿಸಿದರು. ಆದರೆ ಆ ಆಸ್ಫೋಟನೆ ಜೀವದಾಹಕವಾಗಿರಲಿಲ್ಲ; ಬದಲಿಗೆ ನಿರ್ವೀರ್ಯರನ್ನು ವೀರ್ಯವಂತರನ್ನಾಗಿ ಮಾಡಿತು. ದಕ್ಷಿಣ ಆಫ್ರಿಕಾದ ಜೋಹನ್ಸ್‌ಬರ್ಗ್‌ನಲ್ಲಿ ಎಂಪಾಯರ್ ಥಿಯೇಟರಿನಲ್ಲಿ ಸೇರಿದ್ದ ಸುಮಾರು ಮೂರು ಸಾವಿರ ಭಾರತೀಯರ

ಮನಸ್ಸಿನಲ್ಲಿ ಸತ್ಯಾಗ್ರಹ ವಿಚಾರ ಸ್ಫೋಟಗೊಂಡಿತು. ಅವರ ಮನದಲ್ಲಿದ್ದ ಹೇಡಿತನವನ್ನೂ, ದಾಸ್ಯ ಮನೋವೃತ್ತಿಯನ್ನೂ,ಹಿಂಸಾ ಭಾವನೆಯನ್ನೂ ಹೋಗಲಾಡಿಸಿ ಧೀರತನವನ್ನೂ, ಸ್ವಾತಂತ್ರ್ಯ ಪ್ರವೃತ್ತಿಯನ್ನೂ, ಅಹಿಂಸಾಭಾವನೆಯನ್ನೂ ನೆಲೆಯೂರಿಸಲು ಭೂಮಿಕೆಯಾಯಿತು. ಮುಂದೆ ನಾಲ್ಕು ದಶಕಗಳಲ್ಲಿ ಪ್ರಪಂಚದ ಮಹಾನ್ ಸಾಮ್ರಾಜ್ಯವೊಂದು ಅಸ್ತಂಗತವಾಗಿ ವಿಶ್ವದ ಎಲ್ಲೆಡೆಯಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ರೂಪುಗೊಳ್ಳುವುದಕ್ಕೆ ಕಾರಣವಾಯಿತು; ೧೭೮೯ ರಲ್ಲಿ ನಡೆದ ಫ್ರಾನ್ಸ್ ಕ್ರಾಂತಿಯ ಧ್ಯೇಯ-ಧೋರಣೆಗಳಾದ ಸ್ವಾತಂತ್ರ್ಯ-ಸಮಾನತೆ-ಭ್ರಾತೃತ್ವದ ಮೌಲ್ಯಗಳು ಅತ್ಯಂತ ಹಿಂದುಳಿದ ದೇಶಗಳಲ್ಲಿಯೂ ಆಚರಣೆಗೆ ಬರಲು ನಾಂದಿಯಾಯಿತು. ಸೇನಾಧಿಕಾರಿಯೂ ಸರ್ವಾಧಿಕಾರಿಯೂ ಆಗಿದ್ದ ಜನರಲ್ ಸ್ಮಟ್ಸ್ ಗಾಂಧೀಜಿಯ ಸತ್ಯಾಗ್ರಹದ ಎದುರಿನಲ್ಲಿ ವಿನೀತನಾಗಿ ತನ್ನ ತಪ್ಪನ್ನು ಒಪ್ಪಿಕೊಂಡ. ತಾನು ಜಾರಿಗೊಳಿಸಿದ್ದ ಕರಾಳಶಾಸನ-ಏಷಿಯಾಟಿಕ್ ರಿಜಿಷ್ಟ್ರೇಷನ್ ಆ್ಯಕ್ಟ್‌ನ್ನು ಹಿಂದಕ್ಕೆ ತೆಗೆದುಕೊಂಡ. ಸುಮಾರು ಎಂಟು ವರ್ಷಗಳಕಾಲ ನಡೆದ ಸತ್ಯಾಗ್ರಹ ಆಧಾರಿತ ಹೋರಾಟದಲ್ಲಿ ಒಂದೇ ಒಂದು ರಕ್ತದ ಹನಿ ಹೋರಾಟಗಾರರ ಪರ-ವಿರೋಧದ ಎರಡು ಪಾಳೆಯದಲ್ಲೂ ಬೀಳಲಿಲ್ಲ. ಹೀಗಿತ್ತು ಗಾಂಧೀಜಿಯವರ ಸತ್ಯಾಗ್ರಹದ ಅಸ್ತ್ರದ ಶಕ್ತಿ.

ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿಯ ತಮ್ಮ ಹೋರಾಟದ ಮೂಲಕ ಜಗತ್ತಿಗೆ ಕೊಟ್ಟಿರುವ ಸತ್ಯಾಗ್ರಹದ ಕಾಣಿಕೆ ಬಹು ಅಮೂಲ್ಯವಾದುದು. ಆದ್ದರಿಂದಲೇ ವಿಶ್ವದ ಎಲ್ಲ ನೋಬೆಲ್ ಪ್ರಶಸ್ತಿ ವಿಜೇತರು ಒಂದು ಹೇಳಿಕೆಯನ್ನು ಕೊಟ್ಟು ಇಂದು ಪ್ರಪಂಚದ ಎದುರಿನಲ್ಲಿ ಗಾಂಧೀ ಮಾರ್ಗವೊಂದಲ್ಲದೆ ಬೇರೆ ಯಾವ ಮಾರ್ಗವೂ ಇಲ್ಲವೆಂದು ಸ್ಪಷ್ಟವಾಗಿ ಹೇಳಿದರು.

ಸತ್ಯಾಗ್ರಹವನ್ನು ಗಾಂಧೀಜಿಯವರು ತಮ್ಮ ಮಟ್ಟಿಗೆ ಮಾತ್ರ ಇಟ್ಟುಕೊಳ್ಳಲಿಲ್ಲ; ಅದು ತನ್ನ ಜೀವನದ ಎಲ್ಲ ಅಂಗ ಅಂಗಗಳನ್ನೂ, ವಿಚಾರಗಳನ್ನೂ ಸ್ಪರ್ಶಿಸುವಂತೆ ಮಾಡಿದರು; ತಮ್ಮ ಕುಟುಂಬದ ಕಕ್ಷೆಯಲ್ಲಿಯೂ, ಆಶ್ರಮಗಳ ಪರಿಧಿಯಲ್ಲೂ ಪ್ರಯೋಗಿಸಿದರು; ತಮ್ಮ ಬಂಧುಗಳ ಮೇಲೂ, ಮಿತ್ರರ ಮೇಲೂ, ಹೆಂಡತಿಯ ಮೇಲೂ ಜಾರಿಗೊಳಿಸಿದರು; ಗಿರಣಿ ಕಾರ್ಮಿಕರ ಮೇಲೂ, ರೈತರ ಮೇಲೂ ಪರೀಕ್ಷಿಸಿದರು. ಪದೇ ಪದೇ ಕಾರಾಗೃಹಕ್ಕೆ ತಳ್ಳುತ್ತಿದ್ದ ಶಾಸನದ ವಿರುದ್ಧವೂ ಪ್ರಯೋಗಿಸಿದರು. ಈ ಎಲ್ಲ ಪ್ರಯೋಗಗಳಲ್ಲಿ ಅವರು ಯಶಸ್ವಿ ಸತ್ಯಾಗ್ರಹಿಯಾಗಿ ಹೊರಬಂದರು. ಮತ್ತು ಸತ್ಯಾಗ್ರಹದ ಸತ್ವವನ್ನು ಹೆಚ್ಚಿಸಿದರು. ಹಿಟ್ಲರ್ ಮತ್ತು ಮುಸಲೋನಿಯಂಥ ಸರ್ವಾಧಿಕಾರಿಗಳಿಗೂ ಪತ್ರ ಬರೆದು ಸತ್ಯಾಗ್ರಹ ಸಿದ್ಧಾಂತ ಕುರಿತು ಆಲೋಚಿಸುವಂತೆ ಮಾಡಿದರು.

ಗಾಂಧೀಜಿಯವರ ಸತ್ಯಾಗ್ರಹ ಅಸ್ತ್ರದ ಬಗ್ಗೆ ಪ್ರಪಂಚದ ಎಲ್ಲ ದೊಡ್ಡ ಮಹನೀಯರಾದ ಕ್ಯಾಂಟ್, ಲಿಯೋ ಟಾಲ್‌ಸ್ಟಾಯ್, ರೊಮೆನ್ ರೋಲ್ಯಾಂಡ್‌ರನ್ನು ಸೇರಿದಂತೆ, ಭಾರತೀಯ ಚಿಂತಕರೂ ಸೇರಿದಂತೆ, ಬಹು ಗೌರವಪೂರ್ಣವಾದ, ಬಹು ಕೊಂಡಾಡಿಕೆಯ ಮಾತುಗಳನ್ನೇನೋ ಆಡುತ್ತಾರೆ. ಭಾರತೀಯ ಕಮ್ಯುನಿಸ್ಟರೂ, ಸೋಷಿಯಲಿಸ್ಟರೂ ಮೆಚ್ಚುತ್ತಾರೆ. ಗಾಂಧೀಜಿಯಂಥ ಸತ್ಯಾಗ್ರಹೀವ್ಯಕ್ತಿ ಈ ಭೂಮಿಯ ಮೇಲೆ ನಡೆದಾಡಿದ್ದನೇ ಎಂದು ಮುಂದಿನ ಪೀಳಿಗೆ ಸಂಶಯ ಪಡುತ್ತದೆ ಎಂದು

ಐನ್‌ಸ್ಟೈನ್ ಅಭಿಪ್ರಾಯ ಪಟ್ಟಿದ್ದರು. ಇಷ್ಟೆಲ್ಲ ಗುಣಗಾನಗಳು ಗಾಂಧೀಜಿ ಮತ್ತು ಅವರ ಸತ್ಯಾಗ್ರಹ ಅಸ್ತ್ರದ ಬಗ್ಗೆ ಇರುವುದಾದರೂ ಇಂದಿನ ಆಧುನಿಕ ಯುಗದಲ್ಲಿ ಗಾಂಧೀತತ್ವ ಪರಿಪಾಲನೆ, ಸತ್ಯಾಗ್ರಹದ ಅನ್ವಯತೆ ಸಾಧ್ಯವೇ ಎಂದು ಕೇಳಲಾಗುತ್ತದೆ. ಈ ಪ್ರಕಾರದ ಪ್ರಶ್ನೆ ಕೇಳುವವರ ಮನಸ್ಸಿನಲ್ಲಿ ಸತ್ಯಾಗ್ರಹದ ವಿಚಾರ ಸಮಕಾಲಿನವಲ್ಲದ್ದು (Out dated)ಎಂಬ ಕಲ್ಪನೆ ಇದೆ. ಈ ಪ್ರಶ್ನೆ ಗಾಂಧೀಯ ಕಾಲದಲ್ಲೇ, ಸತ್ಯಾಗ್ರಹದ ಪ್ರಯೋಗದ ಭರಾಟೆಯ ಕಾಲದಲ್ಲಿಯೇ ಕೇಳಲಾಗಿತ್ತು. ಇಂಥ ಪ್ರಶ್ನೆಗಳು ಸತ್ಯಾಗ್ರಹದ ಅರ್ಥವನ್ನು ಅದರ ಶಕ್ತಿಯನ್ನು ಸರಿಯಾಗಿ ತಿಳಿಯದಂಥವರು ಕೇಳುವ ಪ್ರಶ್ನೆಗಳೆಂದು ಗಾಂಧೀ ಉತ್ತರಿಸುತ್ತಿದ್ದರು. ಆದರೆ ಗಾಂಧೀಯುವರ ಮಟ್ಟಿಗೆ ಎಂಥ ಸ್ಥಿತಿಯಲ್ಲೂ, ಎಂಥ ಸಾಮಾನ್ಯರಿಂದಲೂ ಉಪಯೋಗಕ್ಕೆ ಬರುವ ಅಸ್ತ್ರ ಸತ್ಯಾಗ್ರಹವಾಗಿತ್ತು. ಸತ್ಯಾಗ್ರಹದ ಯಶಸ್ಸು ಯಾವ ಪರಿಸ್ಥಿತಿಯಲ್ಲಿ ಇದೆ, ಯಾವ ಪರಿಸ್ಥಿಯಲ್ಲಿ ಇಲ್ಲ ಎನ್ನುವುದಕ್ಕಿಂತಲೂ ಸತ್ಯಾಗ್ರಹದ ಅಸ್ತ್ರವನ್ನು ಉಪಯೋಗಿಸುವ ವ್ಯಕ್ತಿಯನ್ನು ಅವಲಂಬಿಸಿದೆ ಎಂದು ಹೇಳುತ್ತತಿದ್ದರು. ಓರ್ವ ವಿಜ್ಞಾನಿಯಂತೆ ಸತ್ಯಾಗ್ರಹ ಕುರಿತ ಪ್ರಯೋಗಗಳನ್ನು ಮಾಡಿದರು. ಅದರಲ್ಲಿ ಯಶಸ್ಸನ್ನು ಕಂಡ ಮೇಲೆಯೇ ಬೇರೆಯವರಿಗೆ ಅದರ ಸಾಧಕ-ಬಾಧಕಗಳನ್ನು ತಿಳಿಸಿದರು. ಸತ್ಯಾಗ್ರಹದ ವಿಚಾರವನ್ನು ಭೂಮಿಯಷ್ಟೇ ಸ್ಥಿರವಾದ ಸತ್ಯದ ಆಧಾರದ ಮೇಲೆ ನಿಲ್ಲಿಸಿದರು; ಸತ್ಯಕ್ಕೆ ಪರ್ಯಾಯ ಶಬ್ದಗಳಾದ ಪ್ರೇಮ ಮತ್ತು ಅಹಿಂಸೆಯನ್ನು ಸಾಧನಗಳನ್ನಾಗಿ ರೂಪಿಸಿದರು. ಆದ್ದರಿಂದ ಸತ್ಯಾಗ್ರಹ ಅಸ್ತ್ರವನ್ನು ಜನರಲ್ ಸ್ಮಟ್ಸ್, ಜನರಲ್ ಡಾಯರ್, ಲಾರ್ಡ್ ಮೌಂಟ್ ಬ್ಯಾಟನ್, ಪ್ರಧಾನಿ ವಿನ್‌ಸ್ಟನ್ ಚರ್ಚಿಲ್, ಲಾರ್ಡ್ ಅಟ್ಲೀ, ನೇತಾಜಿ ಸುಭಾಶ್‌ಚಂದ್ರ ಬೋಸ್ ಮುಂತಾದವರೆಲ್ಲ ತಮ್ಮ ಎಲ್ಲ ಸಂಕೋಚಗಳೊಂದಿಗೆ ಒಪ್ಪಿದರು. ಅಷ್ಟೇ ಅಲ್ಲ ಸತ್ಯಾಗ್ರಹಕ್ಕೆ ಪರ್ಯಾಯವಾದ ಅಹಿಂಸಾತ್ಮಕವಾದ ಬೇರೆ ಮಾರ್ಗವನ್ನು ಸೂಚಿಸಲು ವಿಫಲರಾದರು.

ಯಾವ ರೀತಿ ಅಣು ಅಸ್ತ್ರಯುಗ ಪ್ರಾರಂಭವಾದ ಮೇಲೆ ಜಗತ್ತು ತನ್ನ ಪ್ರಾಚೀನತೆಯನ್ನು ಕಳಚಿಕೊಂಡಿತೋ ಹಾಗೆಯೇ ೧೯೦೬ ರಲ್ಲಿ ಸತ್ಯಾಗ್ರಹ ಸಿದ್ಧಾಂತ ಹುಟ್ಟಿಕೊಂಡಾದಮೇಲೆ ಹಿಂಸಾಮಯ ಜಗತ್ತು ತನ್ನ ಅಮಾನವೀಯತೆಯ ದೌರ್ಬಲ್ಯವನ್ನು ಕಳಚಿ ಮಾನವೀಯತೆಯ ಮೌಲ್ಯಗಳನ್ನು ಧರಿಸಿತು. ತನ್ನ ಪಯಣದ ದಾರಿಯನ್ನು ಗೊತ್ತುಮಾಡಿಕೊಂಡಿತು.

ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಆಧುನಿಕತೆಯೇ ಕಾರಣವಾಗಿರುವಾಗ ಆ ಆಧುನಿಕತೆಯನ್ನೇ ಪರಿಹಾರದ ಮಾರ್ಗವೆಂದು ತಿಳಿದು ನಡೆಯುವುದು ಮೂರ್ಖತನವೆಂದು ಗಾಂಧೀಜಿ ಆಗಲೇ ತಮ್ಮ ೧೯೦೬ ರ ಹಿಂದ್ ಸ್ವರಾಜ್ ಪುಸ್ತಕದ ಮೂಲಕ ಸಾರಿ ಹೋಗಿದ್ದಾರೆ; ತಮ್ಮ ಸತ್ಯದೊಂದಿಗಿನ ಪ್ರಯೋಗವನ್ನು ಆತ್ಮಚರಿತ್ರೆಯ ಮೂಲಕ ತಿಳಿಸಿ ಹೋಗಿದ್ದಾರೆ. ಹೀಗೆ ಕಣ್ಣಿಗೆ ಕಾಣುವ ಅಂಗೈಮೇಲಿನ ಹುಣ್ಣನ್ನು ನೋಡಲು ಕನ್ನಡಿ ಬೇಕೆ? ಗಾಂಧೀಜಿ ಹೇಳಿದ ಈ ಒಂದು ಮಾತು ನಮಗೆ ನೆನಪಿನಲ್ಲಿ ಉಳಿಯುವುದಾದರೆ "ತಂದಿದ್ದೇನೆ ಸತ್ಯಾಗ್ರಹದ ಕಾಣಿಕೆ" ಎಂಬ ಶೀರ್ಷಿಕೆ ಎಷ್ಟು ಸಮಂಜಸ ಎಂದು ತಾನಾಗಿಯೇ ಗೊತ್ತಾಗುತ್ತದೆ.

"ನನ್ನಂತಹ ನೂರಾರು ಜನ ನಾಶವಾಗಲಿ ಆದರೆ ಸತ್ಯ ಮಾತ್ರ ನಿಲ್ಲಲಿ."

* * *

ಹಿನ್ನೆಲೆಗೆ ಸರಿದ ಗಾಂಧೀ

-ಕುಲದೀಪ ನಯ್ಯರ್

ಆಚರಣೆಗಳು ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿವೆ. ಆದರೆ ಅವರ ಸಾವಿನ ೫೫ ವರ್ಷಗಳ ನಂತರ, ಮಹಾತ್ಮ ಗಾಂಧೀಯವರ ಜನ್ಮ ದಿನವೂ ಬರೀ ಔಪಚಾರಿಕ ಆಚರಣೆಯಾಗುತ್ತದೆ ಎಂದು ನಾನೆಂದೂ ಎಣಿಸಿರಲಿಲ್ಲ. ಹಿಂದಿನಂತೆಂಯೇ ಅಕ್ಟೋಬರ್ ೨ ಎಂದರೆ, ಗಾಂಧೀಜಯಂತಿಯಂದು-ಸಾರ್ವತ್ರಿಕ ರಜೆ, ಗಾಂಧೀ ಸಮಾಧಿ ಇರುವ ರಾಜ್‌ಘಾಟ್‌ನಲ್ಲಿ ಪ್ರಧಾನಿಯವರು ಹೂಗುಚ್ಛ ಇರಿಸುವರು. ರಾಷ್ಟ್ರದ ವಿವಿಧ ಭಾಗಗಳಲ್ಲಿ ಅವರ ಸ್ಮರಣಾರ್ಥ ಪ್ರಾರ್ಥನಾ ಸಭೆಗಳನ್ನು ನಡೆಸಲಾಗುವುದು. ಇನ್ನೆಲ್ಲೋ ಅವರ ಅಹಿಂಸೆಯ ತತ್ವಗಳನ್ನು ಸ್ಮರಿಸಿಕೊಳ್ಳಲು ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆನೋ.

ಕಳೆದ ಹಲವಾರು ವರ್ಷಗಳಲ್ಲಿ ಗಾಂಧೀ ತತ್ವಗಳನ್ನು ಕುರಿತು ಉತ್ಸಾಹ ಕುಗ್ಗುತ್ತಿರುವುದನ್ನೂ, ಅವರ ಹೆಸರಲ್ಲಿ ಜನರ ಪಾಲ್ಗೊಳ್ಳುವಿಕೆ ಕಡಿಮೆಯಾಗುತ್ತಿರುವುದನ್ನೂ, ಕಂಡಿದ್ದೇನೆ. ನಾನು ನಡೆಸಿದ ಸಣ್ಣ ಸಮೀಕ್ಷೆಂಯೊಂದರ ಪ್ರಕಾರ, ಯುವಜನರಿಗೆ ಗಾಂಧೀಂಯೊಬ್ಬರು ಮಸಕಾದಂತಹ ಚಿತ್ರ, ಹಿಂದೆಲ್ಲೋ, ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿದಂತಹವರು. ಗೌರವ ಹಾಗೂ ಅರ್ಪಣೆಯ ಚೈತನ್ಯವೇ ಕಾಣದಂತಾಗಿದೆ.

ಗಾಂಧೀ ಹಿನ್ನೆಲೆಗೆ ಸರಿದಿದ್ದಾರೆ. ಇಂದಿನ ಭಾರತವನ್ನು ನೋಡಿದರೆ ಮಿಲಿಟರಿ ಶಕ್ತಿ ಹಾಗೂ ಹೊಳೆಯುವ 'ಪ್ಲಾಜಾ ಗಳ ಮುಂದೆ ಅವರ ನುಡಿಗಳು ಅರ್ಥ ಕಳೆದುಕೊಳ್ಳುತ್ತಿವೆ. ನಮಗೆ ಸ್ವಾತಂತ್ರ್ಯ ಹಾಗೂ ಘನತೆಯನ್ನು ತಂದುಕೊಟ್ಟ ವ್ಯಕ್ತಿಯನ್ನು ಅನುಸರಿಸುವವರ ಸಂಖ್ಯೆ ದಿನೇ ದಿನೇ ವಿರಳವಾಗುತ್ತಿದೆ. ಅವರು ಸ್ವಾತಂತ್ರ್ಯ ಚಳುವಳಿಯನ್ನು ಮುನ್ನಡೆಸಲು ನೆಲೆಯಾಗಿದ್ದಂತಹ ವಾರ್ಧಾ ದಿನೇ ದಿನೇ ಅನಾಥವಾಗುತ್ತಿದೆ. ಬ್ರಿಟಿಷರ ವಿರುದ್ಧ ಅವರು ಯುದ್ಧ ಸಾರಿದಂತಹ ಆಶ್ರಮದ ತಾಣವನ್ನು ನೋಡಲು ಬರುವ ಕುತೂಹಲಿ ಸಂದರ್ಶಕರ ಸಂಖ್ಯೆಯೂ ಕುಸಿಯುತ್ತಿದೆ.

ಬಹುಶಃ ವಿಮೋಚನ ಚಳುವಳಿ ಹಳತಾದಂತೆ, ವಿಶ್ವಾದ್ಯಂತ ಇಂತಹದೇ ಪ್ರಕ್ರಿಯೆ ಮೇಲುಗೈ ಪಡೆಯುತ್ತದೆಯೇನೊ, ಸರ್ಕಾರದ

ವತಿಯಿಂದಲೂ ಈ ನಿರ್ಲಕ್ಷ್ಯ ವ್ಯಕ್ತವಾಗುತ್ತದೆ; ತಮ್ಮ ಆಡಳಿತ ಪಕ್ಷಕ್ಕೆ ಸೇರಿದವರಲ್ಲ ಎಂಬ ಕ್ಷುಲ್ಲಕ ಕಾರಣಕ್ಕಾಗಿಯೇ, ಇಂತಹ ನಾಯಕರಿಗೆ ಬೆನ್ನು ತಿರುಗಿಸಲಾಗುತ್ತದೆ. ರಾಷ್ಟ್ರದ ಪಿತಾಮಹ ತೆರೆಮರೆಗೆ ಹೋಗಲು ಅವಕಾಶ ನೀಡಿದ್ದೇ ಆದಲ್ಲಿ ಅದು ರಾಷ್ಟ್ರಕ್ಕೊಂದು ಕಳಂಕ. ಅವರು ರಾಷ್ಟ್ರದ ನೈತಿಕ ನೆಲೆಯನ್ನು ಪ್ರತಿನಿಧಿಸುತ್ತಾರೆ. ಹೀಗಿದ್ದೂ, ಉತ್ತಮ ಪರಂಪರೆ ಹಾಗೂ ಪವಿತ್ರ ನೆನಪುಗಳು ರಾಜಕೀಯಗೊಳ್ಳುವುದನ್ನು ಕಂಡಿದ್ದೇನೆ.

ರಾಷ್ಟ್ರಪಿತ ಷೇಕ್ ಮುಜೀಬರ್ ರಹಮಾನ್‌ರ ಭಾವಚಿತ್ರವನ್ನು ಸಾರ್ವಜನಿಕರ ಕಣ್ಣಿನಿಂದ ಖಲೀದಾ ಜಿಯಾ ಸರ್ಕಾರ ದೂರ ಮಾಡಿದಂತಹ ಬಾಂಗ್ಲಾದೇಶದ ಉದಾಹರಣೆಯನ್ನೇ ತೆಗೆದುಕೊಳ್ಳಿ, ಸರ್ಕಾರಿ ಕಚೇರಿಗಳು ಹಾಗೂ ಸಾರ್ವಜನಿಕ ಸ್ಥಳಗಳಿಂದ ಅವರ ಚಿತ್ರಗಳನ್ನು ತೆಗೆದುಹಾಕುವುದಕ್ಕೆ ಅವರು ಕಾನೂನೊಂದನ್ನೇ ಜಾರಿಗೆ ತಂದರು. ಇದು ಮತ್ತೇನಲ್ಲ, ರಾಜಕೀಯ ಅಷ್ಟೆ. ಏಕೆಂದರೆ, ವಿರೋಧಿ ನಾಯಕಿ ಷೇಕ್ ಹಸೀನಾ ಮುಜೀಬರ್ ರಹಮಾನ್‌ರ ಪುತ್ರಿ. ಸೈದ್ಧಾಂತಿಕವಾಗಿ ಗಾಂಧೀ ಚಿಂತನೆಗಳಿಗೆ ವಿರುದ್ಧವಾಗಿರುವ ಭಾರತೀಯ ಜನತಾಪಕ್ಷ (ಬಿ.ಜೆ.ಪಿ.)ದೆಹಲಿಯಲ್ಲಿ ಅಧಿಕಾರ ವಹಿಸಿಕೊಂಡ ನಂತರ ಗಾಂಧೀ ಭಾವ ಚಿತ್ರಗಳು ಕ್ರಮೇಣ ಸಾರ್ವಜನಿಕ ಕಟ್ಟಡಗಳು ಹಾಗೂ ವಿಮಾನ ನಿಲ್ದಾಣಗಳಿಂದ ಮಾಯವಾಗುವಂತೆ ನೋಡಿಕೊಂಡಿತು. ಬಿಜೆಪಿ ಸಚಿವರ ಕೋಣೆಗಳಲ್ಲಿ ಸಂದರ್ಶಕರಿಗೆ ಕಾಣಿಸುವುದು ಗಾಂಧೀ ಚಿತ್ರವಲ್ಲ; ಹಿಂದೂ ಮಹಾಸಭಾ ನಾಯಕ ಶ್ಯಾಮಪ್ರಸಾದ್ ಮುಖರ್ಜಿಯದ್ದು.

ನಾಗಪುರದಲ್ಲಿರುವ (ಆರ್‌ಎಸ್‌ಎಸ್) ಕೇಂದ್ರ ಕಚೇರಿ ಗಾಂಧೀ ಚಿತ್ರವನ್ನು ಪ್ರದರ್ಶಿಸುವುದಿಲ್ಲ. ಅಥವಾ ಅವರ ಜನ್ಮದಿನದಂದು ರಜೆಯನ್ನೂ ನೀಡುವುದಿಲ್ಲ. ಭಾರತೀಯ ಇತಿಹಾಸದಿಂದ 'ಪೂರ್ವಗ್ರಹ ತೊಡೆದು ಹಾಕಬೇಕು, ಎಂಬ ನೆಪದಲ್ಲಿ ಸಂಘ ಪರಿವಾರದ ಮಾನವ ಸಂಪನ್ಮೂಲ ಸಚಿವ ಮುರಳಿ ಮನೋಹರ್ ಜೋಷಿ ಅವರು ಮರುರೂಪಿಸಿದ ಪಠ್ಯಗಳಲ್ಲಿ ಮತಾಂಧ ಹಿಂದೂವೊಬ್ಬನಿಂದ ಗಾಂಧೀ ಹತ್ಯೆಯಾದ ವಿಚಾರವನ್ನೂ ಕೈಬಿಡಲಾಗಿದೆ.

ಇದು ರಾಜಕೀಯವಾಗಿಲ್ಲದಿದ್ದರೆ ಮತ್ತಿನ್ನೇನು? ಹಿಂದೂ ರಾಷ್ಟ್ರವೆಂಬುದು ಮತಗಳಿಕೆಯ ನೆಲೆಯಾಗಿದೆ, ಆದರೆ ಗಾಂಧೀಜಿಯವರು ಧರ್ಮಾಧಾರಿತ ಸರ್ಕಾರಕ್ಕೆ ವಿರೋಧವಾಗಿದ್ದರು. ಅವರೇ ಸಂಪಾದಿಸುತ್ತಿದ್ದ 'ದಿ ಹರಿಜನ್ ಪತ್ರಿಕೆಯಲ್ಲಿ ೧೯೪೬ ರ ಸೆಪ್ಟೆಂಬರ್ ೨೨ ರಂದು ಅವರು ಹೀಗೆ ಬರೆದರು. "ಸರ್ಕಾರ ಎಂಬುದು ನಿಮ್ಮ ಜಾತ್ಯಾತೀತ ಕ್ಷೇಮಾಭಿವೃದ್ಧಿ,

ಆರೋಗ್ಯ ,ಸಂಪರ್ಕ, ವಿದೇಶಿ ಬಾಂಧವ್ಯಗಳು. ಹಣಕಾಸು ಇತ್ಯಾದಿಗಳನ್ನು ನೋಡಿಕೊಳ್ಳುತ್ತದೆ, ಆದರೆ ನಿಮ್ಮ ಅಥವಾ ನನ್ನ ಧರ್ಮವನ್ನು ಪರಿಪಾಲಿಸುವುದಿಲ್ಲ ಅದು ಅವರವರದೇ ವೈಯಕ್ತಿಕ ಕಾಳಜಿ"

ವಿಭಜನೆಯ ನಂತರ ಪಾಕಿಸ್ತಾನದ ಸಂಸ್ಥಾಪಕ ಮೊಹಮ್ಮದ್ ಆಲಿ ಜಿನ್ನಾ ಅವರೂ ತಮ್ಮ ದ್ವಿರಾಷ್ಟ್ರ ಸಿದ್ಧಾಂತಕ್ಕೆ ಹೊಸವ್ಯಾಖ್ಯೆ ನೀಡಿದರು. ಅವರ ಹೊಸ ರಾಷ್ಟ್ರ ಸಿದ್ಧಾಂತ ಧಾರ್ಮಿಕ ತಳಹದಿಯನ್ನು ಆಧರಿಸಿರಲಿಲ್ಲ.

ಧರ್ಮ ಎಂದೂ ರಾಷ್ಟ್ರಕ್ಕೆ ಆಧಾರವಾಗಿರುವುದಿಲ್ಲ. ಎಂಬುದನ್ನು ಗಾಂಧೀ ಯಾವಾಗಲೂ ಎತ್ತಿಹಿಡಿದರು. ವ್ಯಕ್ತಿಯೊಬ್ಬರು ಮತ್ತೊಂದು ಧರ್ಮವನ್ನು ಅಪ್ಪಿಕೊಳ್ಳಬೇಕಾದಲ್ಲಿ. ಅವರು ಬೇರೆ ರಾಷ್ಟ್ರದ ಸದಸ್ಯರಾಗಿ ಬಿಡುತ್ತಾರೆಂದೇನೂ ಇಲ್ಲ.ಎಂದು ಅವರು ಒಮ್ಮೆ ಜಿನ್ನಾಗೆ ಹೇಳಿದ್ದರು. ಅಂತಹ ಚಿಂತನೆ ಈಗಲೂ ಬಹುತೇಕ ಭಾರತೀಯರ ಮನಸ್ಸಿನಲ್ಲಿ ಸ್ವಲ್ಪಮಟ್ಟಿಗೆ ನೆಲೆಸಿದೆ. ಬಾಬರಿ ಮಸೀದಿ ವಿನಾಶ ಅಥವಾ ಗುಜರಾತ್ ಬೆಳವಣಿಗೆಗಳ ನಂತರವೂ ಜನರ ಒಳಮನಸ್ಸು ವೈವಿಧ್ಯತೆಯ ಪರವಾಗಿಯೇ ಇದೆ. ಸಂಘ ಪರಿವಾರ ಈ ಚಿಂತನೆಯನ್ನು ಬದಲಿಸಲು ಬಹಳವಾಗಿ ಯತ್ನಿಸುತ್ತಿದೆ; ಜಾತ್ಯಾತೀತ ಭಾರತವನ್ನು ಹಿಂದೂ ಭಾರತವಾಗಿಸುವುದು ಅದರ ಇರಾದೆ. ಆದರೆ ಅದು ಈ ಯತ್ನಗಳಲ್ಲಿ ವಿಫಲವಾಗಿದೆ. ಏನೇ ಆಕ್ರಮಣಗಳಿರಲಿ, ನಾವಿನ್ನೂ ನಮ್ಮ ಸಮಾಜವನ್ನು ಬಹು ಸಂಸ್ಕೃತಿಯದಾಗಿ ಉಳಿಸಿಕೊಳ್ಳಲು ಹೆಣಗುತ್ತಿದ್ದೇವೆ. ಎರಡೂ ಕೋಮುಗಳಲ್ಲಿರುವ ಮತಾಂಧರು ಈ ಕಾರ್ಯವನ್ನು ಕ್ಲಿಷ್ಟವಾಗಿಸುತ್ತಿದ್ದಾರೆ. ಹೀಗಿದ್ದೂ, ಗಾಂಧೀ ಮೌಲ್ಯಗಳಲ್ಲಿ ಈವರೆಗೆ ಉಳಿದುಕೊಂಡು ಬಂದಿರುವಂತದ್ದು ನಮ್ಮನ್ನು ಕಾಯುತ್ತಿದೆ.

ವಾಸ್ತವವಾಗಿ ಗಾಂಧೀಜಿಯ ಹತ್ಯೆ ೪೦ ವರ್ಷಗಳ ಕೋಮು ಸೌಹಾರ್ದವನ್ನು ನಮಗೆ ನೀಡಿತು. ಹಿಂದೂ ರಾಷ್ಟ್ರದ ಬಗ್ಗೆ ಮಾತನಾಡಿದವರ ಬಾಯಿಯನ್ನು ಮುಚ್ಚಿಸಲಾಗುತ್ತಿತ್ತು. ಆಗ ಬಾಯಿ ತೆರೆಯದೆ ಸಂಘ ಪರಿವಾರ ಎಚ್ಚರಿಕೆ ವಹಿಸಿತ್ತು. ಆಗಿನ ವಾತಾವರಣ ಹೇಗಿತ್ತೆಂದರೆ, ಬಿಜೆಪಿ ಅಥವಾ ಅದರ ಹಿಂದಿನ ಅವತಾರವಾದ ಜನಸಂಘ ಆ ಕಾಲದಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಎಂದೂ ಎರಡು ಸಂಖ್ಯೆಯ ಅಂಕಿಯನ್ನೇ ದಾಟಲಿಲ್ಲ. ಈಗ ಬಹು ಸಂಸ್ಕೃತಿಯ ಸಮಾಜವನ್ನು ಒಗ್ಗೂಡಿಸಬೇಕಿದ್ದ ಶಕ್ತಿಗಳು ವಿಫಲವಾಗಿವೆ ಎಂಬುದೇ ಬೇರೆ ವಿಚಾರ.

ರಾಷ್ಟ್ರದ ಐದನೇ ಒಂದರಷ್ಟು ಜನಸಂಖ್ಯೆ –೨೦೦ ದಶಲಕ್ಷ ಮಂದಿಯ ಜೀವನ ಶೈಲಿಯೇ ಗಾಂಧೀ ತತ್ವಗಳಿಗೆ ವ್ಯತಿರಿಕ್ತ. ನಗರ

ಪ್ರದೇಶಗಳನ್ನು ಆಕ್ರಮಿಸಿಕೊಳ್ಳುತ್ತಿರುವ 'ಹಿಪ್ಪಿ' ಸಂಸ್ಕೃತಿಗೆ ಗಾಂಧೀಜಿಯ ಸಾತ್ವಿಕ ಬದುಕು ಹೊಂದುವುದಿಲ್ಲ, ಸರಳತೆ ಎಂಬುದು ಈಗ ಗುಣವಾಗಿ ಉಳಿದಿಲ್ಲ. ದುರ್ಬಲರನ್ನು ಕೀಳಾಗಿ ಕಾಣಲಾಗುತ್ತಿದೆ. ಇದೀಗ ತಾಕತ್ತಿದ್ದವರದೇ ಬದುಕು. ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ. ಬಡವರು ಬಡವರಾಗುತ್ತಲೇ ನಡೆದಿದ್ದಾರೆ. ಇಲ್ಲೆಲ್ಲಾ ದೇವರು ಬದುಕಿದ್ದಾನೆ ಎಂದು ಗಾಂಧೀ ವರ್ಣಿಸಿದಂತಹ ಗ್ರಾಮಗಳು ಸ್ವಾತಂತ್ರ್ಯ ಬಂದ ೫೫ ವರ್ಷಗಳ ನಂತರವೂ ಹಾಗೇ ಉಳಿದಿವೆ. ಅಭಿವೃದ್ಧಿ ಎಂಬುದು ಅವರಿಗೆ ಲಾಭ ತಂದಿಲ್ಲ. ನಗರಗಳಲ್ಲಿ ಎಲ್ಲಾ ಸುಖಗಳೂ ಇವೆ.

'ತಪ್ಪು ದಾರಿ, ಸರಿಯಾದ ಫಲ ನೀಡುವುದಿಲ್ಲ' ಎಂಬಂತಹ ಗಾಂಧಿಯವರ ಮೂಲ ನಂಬಿಕೆಯನ್ನು ಸಾಧ್ಯವಿರುವ ರೀತಿಯಲ್ಲೆಲ್ಲ ಉಲ್ಲಂಘಿಸಲಾಗುತ್ತದೆ ಎಂಬುದನ್ನು ಕಾಣಲು ಗಾಂಧಿಯೇನಾದರೂ ಈಗ ಜೀವಂತ ಇರುತ್ತಿದ್ದರೆ ಬಹುಶಃ ಅವರಿಗೂ ನಿರಾಸೆಯಾಗಿರುತ್ತಿತ್ತು. ಕ್ರಮಿಸುವ ದಾರಿ ಸರಿಯಿಲ್ಲದಿದ್ದಲ್ಲಿ, ಅಂತ್ಯವೂ ಸರಿಯಿರುವುದಿಲ್ಲ ಎಂದು ಅವರು ಹೇಳುತ್ತಿದ್ದರು. ಆದರೀಗ ಈ ಮಾತಿನಲ್ಲಿ ಅನೇಕ ಭಾರತೀಯರಿಗೆ ನಂಬಿಕೆ ಇಲ್ಲ. ಅವರಿಗೆ ಮುಖ್ಯವಾಗುವುದು ಯಶಸ್ಸು ಮಾತ್ರ. ಅದನ್ನು ಸಾಧಿಸುವ ಮಾರ್ಗ ಮುಖ್ಯವಾಗುವುದಿಲ್ಲ. ಬದುಕಿನ ನೈತಿಕ ಹಾಗೂ ಆಧ್ಯಾತ್ಮಿಕ ಆಯಾಮದ ಬಗ್ಗೆ ಅಪಾರ ತಿರಸ್ಕಾರ ಹೆಚ್ಚುತ್ತಿದೆ.

ಈ ಹಿನ್ನೆಲೆಯಲ್ಲಿ ಸಂಘರ್ಷಗಳನ್ನು ಪರಿಹರಿಸಿಕೊಳ್ಳಲು ಅಹಿಂಸಾತ್ಮಕ ಮಾರ್ಗವನ್ನು ರೂಪಿಸಿಕೊಳ್ಳಬೇಕೆಂಬ ಗಾಂಧಿಯ ವಿಧಾನವನ್ನು ವಿಶ್ವದಲ್ಲಿ ಮಾತ್ರವಲ್ಲ ಭಾರತದಲ್ಲೂ ತಿರಸ್ಕರಿಸಲಾಗುತ್ತದೆ. ನಾವೇ ಅವರನ್ನು ದೂರ ತಳ್ಳಿರುವಾಗ ಇತರರು ಗಾಂಧಿಯನ್ನು ಅನುಸರಿಸಬೇಕು ಎಂದು ಕೇಳಲಾಗದು. ಬಹಶಃ ಇದೇ ಕಾರಣಕ್ಕಿರಬೇಕು, ಇತ್ತೀಚೆಗೆ ಶ್ರೀನಗರದಲ್ಲಿನ ಕಾಶ್ಮೀರ ವಿದ್ಯಾರ್ಥಿಗಳಿಗೂ ನನ್ನ ಮಾತು ರುಚಿಸಲಿಲ್ಲ. ಅವರ ಚಳುವಳಿ ಅಹಿಂಸಾತ್ಮಕವಾಗಿದ್ದಿದ್ದಲ್ಲಿ ಭಾರತದ ನಾಗರಿಕ ಸಮಾಜ ಹಾಗೂ ಇತರೆಡೆಯೂ ಅವರ ಚಳುವಳಿ ಪರಿಣಾಮ ಬೀರುತ್ತಿತ್ತು ಎಂಬ ನನ್ನ ಮಾತು ಪಥ್ಯವಾಗಲಿಲ್ಲ ಎನಿಸುತ್ತದೆ.

(ಪ್ರಜಾವಾಣಿ ಸಾಭಾರ)

***

ನನ್ನ ಕಲ್ಪನೆಯ ಅಹಿಂಸೆ ಪ್ರತಿಕಾರಕ್ಕಿಂತಲೂ ದುಷ್ಟತನದ ವಿರುದ್ಧವಾದ ಹೋರಾಟ

–ಗಾಂಧೀ

ಮೊಗಲ್ ದೊರೆಗಳ ಸಂಸ್ಕೃತ ವ್ಯಾಮೋಹ

-ಡಾ.ಎಚ್.ಪಿ. ದೇವಕಿ.

ಶಾಪೆನ್ ಹೊವರ್‌ನಂತಹ ಜರ್ಮನ್ ವಿದ್ವಾಂಸನಿಗೆ ಆತ್ಮತೃಪ್ತಿ ನೀಡಿದ ಔಪನಿಖಟ್ ಎಂಬ ಕೃತಿಯು ಉಪನಿಷತ್ತುಗಳ ಪರ್ಷಿಯನ್ ಅವತರಣಿಕೆ. ಔಪನಿಖಟ್‌ನ ಲ್ಯಾಟಿನ್ ಅನುವಾದದಿಂದ ವಿಶೇಷವಾಗಿ ಪ್ರಭಾವಿತರಾಗಿದ್ದ ಶಾಪೆನ್ ಹೋವರ್ ಪ್ರತಿದಿನ ಮಲಗುವ ಮುನ್ನ ಉಪನಿಷತ್ತಿನ ಕೆಲವು ಪಂಕ್ತಿಗಳನ್ನೋ ಮಂತ್ರಗಳನ್ನೋ ಪಠಿಸಿಯೇ ನಿದ್ರಿಸುತ್ತಿದ್ದರಂತೆ!. ಉಪನಿಷತ್ತುಗಳನ್ನು ಔಪನಿಖಟ್ ಎಂಬ ಹೆಸರಿನಲ್ಲಿ ಪರ್ಷಿಯನ್ ಭಾಷೆಗೆ ಅನುವಾದಿಸಿ ಸಿದ್ಧಪಡಿಸಿದವನು ಸಂಸ್ಕೃತ ಭಾಷೆಯ ಪರಮ ಮೊಗಲ್ ಚಕ್ರವರ್ತಿ ಷಹಜಹಾನನ ಹಿರಿಯ ಪುತ್ರ ಮೇಲಾಗಿ ಅತ್ಯಂತ ಸುಸಂಸ್ಕೃತನಾಗಿದ್ದ ಮಹಮದ್ ದಾರಾ-ಶಿಕೋ.

'ಔಪನಿಖಟ್' ಕೃತಿಯ ಮೂಲಕ ಇವನು ಉಪನಿಷತ್ತುಗಳ ಅಮರ ಸಂದೇಶವನ್ನು ಪಾಶ್ಚಾತ್ಯ ಜಗತ್ತಿಗೆ ಮುಟ್ಟಿಸಿದವರಲ್ಲಿ ಮೊದಲಿಗ. ಷಹಜಹಾನನ ಆಸ್ಥಾನ ವಿದ್ವಾಂಸನಾಗಿದ್ದು ಅವನಿಂದ ಪಂಡಿತ ರಾಜ ನೆಂದು ಬಿರುದನ್ನೂ ಪಡೆದಿದ್ದ. ಸಂಸ್ಕೃತ ಸಾಹಿತ್ಯ ವಿಮರ್ಶಕರ ಪರಂಪರೆಯಲ್ಲಿಯೇ ನಿಶಿತಮತಿ ಎಂದು ಹೆಸರುವಾಸಿಯಾಗಿದ್ದ. ಜಗನ್ನಾಥ ಪಂಡಿತನಿಗಿದ್ದ ಗಾಢ ಸ್ನೇಹದ ಫಲವಾಗಿಯೇ ಜಗದಾಭರಣ ಎಂಬ ಕೃತಿ ಜಗನ್ನಾಥ ಪಂಡಿತನಿಂದ ರಚಿತವಾಯಿತು. ಸಂಸ್ಕೃತ ಸಾಹಿತ್ಯಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿದ ಮೊಗಲ್ ದೊರೆಗಳ ಹಾಗೂ ಅವರ ಆಳ್ವಿಕೆಯ ಅವಧಿಯಲ್ಲಿ ಪ್ರಸಿದ್ಧರಾಗಿದ್ದ ಸಂಸ್ಕೃತ ಕವಿಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.

ಭಾರತವನ್ನು ಆಳಿದ ಮೊಗಲ್ ಚಕ್ರವರ್ತಿಗಳಲ್ಲಿ ಅಕ್ಬರನ ಆಳ್ವಿಕೆ ಸುವರ್ಣ ಅಕ್ಷರಗಳಲ್ಲಿ ಬರೆಯಬಹುದಾದ ಕಾಲ. ಅವನ ಮೊಮ್ಮಗ ಷಹಜಹಾನನವರೆಗೂ ಸಾಕಷ್ಟು ಪ್ರೋತ್ಸಾಹ ದೊರೆತು ಸಂಸ್ಕೃತ ಸಾಹಿತ್ಯ ಸರಸ್ವತಿಯು ಮೊಗಲ್ ದೊರೆಗಳ ಕೃಪಾಶ್ರಯದಲ್ಲಿ ವಿಜೃಂಭಿಸಿ, ಲಕ್ಷ್ಮಿಯ ಸಾನಿಧ್ಯದಿಂದ ಉಚ್ಛ್ರಾಯ ಸ್ಥಿತಿಗೆ ಏರಿ ಮೆರೆದ ಸಮಯವದು.

ಮೊಗಲ್ ಚಕ್ರವರ್ತಿಗಳಲ್ಲೇ ಅತಿ ಪ್ರಸಿದ್ಧನೂ ಜನಾನುರಾಗಿಯೂ ಕಲೆ ಸಾಹಿತ್ಯಗಳಲ್ಲಿ ಆಸಕ್ತಿ ಉಳ್ಳವನೂ ಆಗಿದ್ದಂತವನು ಅಕ್ಬರ್. ಹಿಂದೂಗಳಲ್ಲಿ ಮಹಮ್ಮದೀಯ ಸಾಹಿತ್ಯದತ್ತ ಹಾಗೂ ಮಹಮ್ಮದೀಯರಲ್ಲಿ ಹಿಂದೂ ಸಾಹಿತ್ಯದತ್ತ ಒಲವು ಮೂಡಿಸುವುದರಲ್ಲಿ ಅಕ್ಬರನಷ್ಟು ಬಹುಶಃ ಬೇರಾವ ಮೊಗಲ್ ಚಕ್ರವರ್ತಿಯು

ಶ್ರಮ ವಹಿಸಿಲ್ಲ. ಇವನ ಆಳ್ವಿಕೆಯ ಸಮಯದಲ್ಲಿ ಸಾಹಿತ್ಯ ಕ್ಷೇತ್ರದ ಹಲವಾರು ಪ್ರಕಾರಗಳಲ್ಲಿ ಉತ್ತಮೋತ್ತಮ ಕೃತಿಗಳು ರಚನೆಗೊಂಡವು.

ಚಾರಿತ್ರಿಕ ದಾಖಲೆ ಆಗಿರುವ 'ಐನ್-ಇ-ಅಕ್ಬರಿ' ಯಲ್ಲಿಯೂ ಅನೇಕ ಸಂಸ್ಕೃತ ಕವಿಗಳ, ಕಾವ್ಯಗಳ ಉಲ್ಲೇಖವನ್ನು ಕಾಣಬಹುದು. ಹಿಂದೂ ಮುಸಲ್ಮಾನರೆಂಬ ಭೇದವಿಲ್ಲದೆ ಪ್ರತಿಭೆಗೆ ಮಾತ್ರ ಧಾರಾಳವಾಗಿ ಪುರಸ್ಕಾರ ನೀಡುತ್ತಿದ್ದ ಅಕ್ಬರ ಚಕ್ರವರ್ತಿಯ ಆಸ್ಥಾನವು ಪ್ರಸಿದ್ಧ ಕವಿ, ಸಂಗೀತ ವಿದ್ವಾಂಸರಿಂದ ತುಂಬಿ ಹೋಗಿತ್ತು. ಅಕ್ಬರನಿಂದ ಪ್ರೋತ್ಸಾಹಿತನಾಗಿ ಪುಂಡರೀಕ ವಿಠಲನೆಂಬ ಕವಿಯು ನರ್ತನ-ನಿರ್ಣಯ ಹಾಗೂ ಷಡ್‌ರಾಗ-ಚಂದ್ರೋದಯ ಗಳೆಂಬ ಕೃತಿಗಳನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ. ನರ್ತನ-ನಿರ್ಣಯದ ಪೀಠಿಕಾ ಶ್ಲೋಕಗಳಲ್ಲಿ ಅಕ್ಬರ್ ಚಕ್ರವರ್ತಿಯ ಪ್ರೀತ್ಯರ್ಥವಾಗಿಯೇ ಈ ಗ್ರಂಥ ರಚಿತವಾಯಿತು ಎಂಬ ಉಲ್ಲೇಖವಿದೆ.

ಅಕಬ್ಬರನೃಪರುಚ್ಯರ್ಥಂ ಭೂಲೋಕೇ ಸರಲ ಸಂಗೀತಮ್/
ಕೃತಮಿದಂ ಬಹುತರಭೇದಂ ಸುಹೃದಾಂ ಹೃದಯೇ ಸುಖಂ ಭೂಯಾತ್//

ಗಂಗಾಧರನೆಂಬ ಮತ್ತೊಬ್ಬ ವಿದ್ವಾಸನಿಂದ ನೀತಿಸಾರ ವೆಂಬ ಕೃತಿ ರಚನೆ ಆಯಿತು. ಚಕ್ರವರ್ತಿಯ ಅನನ್ಯ ಗೌರವಕ್ಕೆ ಪಾತ್ರನಾಗಿದ್ದ ಪದ್ಮ ಸುಂದರನೆಂಬ ಕವಿಯು ದೊರೆಯ ಕೀರ್ತಿಯನ್ನು ಅಮರಗೊಳಿಸಬೇಕು. ಎಂಬ ಹೆಬ್ಬಯಕೆಯಿಂದ ಅಕ್ಬರ ಶೃಂಗಾರ ದರ್ಪಣ ಎಂಬ ಕೃತಿಯನ್ನು ರಚಿಸಿ ಪ್ರತಿ ಗೌರವವನ್ನು ಪ್ರದರ್ಶಿಸಿದ.

ಸಂಸ್ಕೃತ ಹಾಗೂ ಪರ್ಷಿಯನ್ ಭಾಷೆ ಎರಡರಲ್ಲೂ ವಿಶೇಷ ಪರಿಣತನಾಗಿದ್ದ ಕೃಷ್ಣದಾಸನೆಂಬ ವ್ಯಾಕರಣ ವಿದ್ವಾಂಸನಿಂದ ಪರ್ಷಿಯನ್ ವ್ಯಾಕರಣದ ಸಂಸ್ಕೃತ ಅವತರಣಿಕೆಯು ಪಾರಸಿಕ-ಪ್ರಕಾಶ ಎಂಬ ಹೆಸರಿನಲ್ಲಿ ರಚಿತವಾಯಿತು. ಪಾರಸಿಕ-ಪ್ರಕಾಶ ಎಂಬ ಶಬ್ದಕೋಶವೂ ಸಹ ಇದೇ ಕೃಷ್ಣದಾಸನಿಂದಲೇ ಬರೆಯಲ್ಪಟ್ಟಿದ್ದು. ಇದರ ಹಸ್ತಪ್ರತಿಯು ಬಂಗಾಳದ ರಾಯಲ್-ಏಷ್ಯಾಟಿಕ್ ಸೊಸೈಟಿಯ ಆಶ್ರಯದಲ್ಲಿ ಸಂಗ್ರಹಿತವಾಗಿದೆ.

ಅಕ್ಬರನ ಪುತ್ರ ಜಹಾಂಗೀರನೂ ಸಹ ಸಂಸ್ಕೃತ ಸಾಹಿತ್ಯ ಪ್ರಿಯನಾಗಿದ್ದರೂ ಅಕ್ಬರನ ಕಾಲದಲ್ಲಿ ಸಾರಸತ್ವ ಲೋಕವನ್ನು ಮುಟ್ಟಿದಷ್ಟು ಗ್ರಂಥಗಳ ಜಹಾಂಗೀರನ ಕಾಲದಲ್ಲಿ ಹೊರಬರಲಿಲ್ಲ. ನೀಲಕಂಠನೆಂಬ ಕವಿ ಅಕ್ಬರನ ಪ್ರೀತಿ ಪ್ರೋತ್ಸಾಹಗಳಿಗೆ ಪಾತ್ರನಾಗಿದ್ದರೆ. ಅವನ ಪುತ್ರ ಕವಿ ಕರ್ಣ ಪೂರ್ಣ ಎಂಬುವನು ಜಹಾಂಗೀರನ ಗೌರವಕ್ಕೆ ಪಾತ್ರನಾಗಿದ್ದ. ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳಲ್ಲಿ ಪ್ರಸಿದ್ಧವಾಗಿರುವ ವಾಮನನ ಕಾವ್ಯಾಲಂಕಾರ ಸೂತ್ರ ಎಂಬ ಗ್ರಂಥದ ಹಸ್ತಪ್ರತಿಗೆ ಸಲೀಮ ನೆಂಬ ಅಂಕಿತವುಳ್ಳ (ಜಹಾಂಗೀರನ ಮತ್ತೊಂದು ಹೆಸರು) ಮುದ್ರೆ ಹಾಕಲಾಗಿದ್ದು ಜಹಾಂಗೀರನ ಗ್ರಂಥ ಭಂಡಾರದಲ್ಲಿ ವಾಮನನ ಗ್ರಂಥವೊಂದು ಇತ್ತು ಎಂಬುದಕ್ಕೆ ಈ ಹಸ್ತಪ್ರತಿ ಸಾಕ್ಷಿಯಾಗಿದೆ.

ಜಹಾಂಗೀರನ ನಂತರ ಅವನ ಮಗ ಷಹಜಹಾನ್ ಚಕ್ರವರ್ತಿ ಕಾಲದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಮತ್ತೆ ವಿಶೇಷ ಚಾಲನೆ ದೊರೆತು ಮರು ಚೇತನ ಪಡೆದು ಲಕ್ಷ್ಮಿ-ಸರಸ್ವತಿಯರ ಅಪೂರ್ವ ಸಮಾಗಮ ಎಂಬಂತೆ ಮೆರೆಯಿತು. ಸಂಸ್ಕೃತ ಸಾಹಿತ್ಯ ಕ್ಷೇತ್ರದಲ್ಲಿ ರತ್ನಪ್ರಾಯರೆನಿಸಿದ ಜಗನ್ನಾಥ ಪಂಡಿತ. ಕವೀಂದ್ರಾಚಾರ್ಯ, ನಿತ್ಯಾನಂದ ವೇದಾಂಗರಾಯ. ಪರಶುರಾಮ ಮೊದಲಾದ ಕವಿಗಳಿಗೆ ಆಶ್ರಯ ನೀಡಿ ಷಹಜಹಾನನು ತನ್ನ ಅಜ್ಜ ಅಕ್ಬರನಂತೆಯೇ ಉಜ್ವಲ ಕೃತಿಗಳ ರಚನೆಗೆ ಪ್ರೋತ್ಸಾಹ ನೀಡಿದ. ಕವೀಂದ್ರಾಚಾರ್ಯ ಎಂಬ ಸಂಸ್ಕೃತ ಪಂಡಿತನಿಗೆ ಷಹಜಹಾನ್ ಚಕ್ರವರ್ತಿಯಿಂದ ಸರ್ವವಿದ್ಯಾನಿಧಾನ ಎಂಬ ಬಿರುದು, ಪರಶುರಾಮ ಎಂಬ ಕವಿಗೆ ವಾಣೀವಿಲಾಸರಾಯ ಎಂಬ ಬಿರುದು ಲಭಿಸಿತ್ತು. ಮಾನಜಿತನೆಂಬ ಪಂಡಿತನಿಗೆ ವೇದಾಂಗರಾಯ ಎಂಬ ಬಿರುದೂ ಲಭಿಸಿದ್ದು ಇವರೆಲ್ಲರೂ ಆಸ್ಥಾನದಲ್ಲಿ ಚಕ್ರವರ್ತಿಯ ಗೌರವಾದರಗಳಿಗೆ ಪಾತ್ರರಾಗಿದ್ದರು.

ವೇದಾಂಗರಾಯನು ತನ್ನ ಅಭಿವೃದ್ಧಿಗೆ ಕಾರಣನಾದ ಚಕ್ರವರ್ತಿಯ ಪ್ರೀತ್ಯರ್ಥವಾಗಿಯೇ ಪಾರಸೀ ಪ್ರಕಾಶ ಎಂಬ ಜ್ಯೋತಿಷ ಗ್ರಂಥವನ್ನು ರಚಿಸಿದ. ಸಿದ್ಧಾಂತ ಸಿಂಧು ಎಂಬ ಮತ್ತೊಂದು ಜ್ಯೋತಿಷ ಗ್ರಂಥವು ನಿತ್ಯಾನಂದ ಎಂಬ ಪಂಡಿತನಿಂದ ರಚಿತವಾಯಿತು. ವೇದಾಂಗರಾಯನ ಪಾರಸೀ ಪ್ರಕಾಶದ ಪೀಠಿಕೆಯಲ್ಲಿನ ಈ ಕೆಳಗಿನ ಶ್ಲೋಕವು ಷಹಜಹಾನನಿಗೆ ಸಂಸ್ಕೃತ ಭಾಷೆಯ-ಸಾಹಿತ್ಯದಲ್ಲಿ ಇರುವ ಆಸಕ್ತಿಯನ್ನು ಬಿಂಬಿಸುತ್ತದೆ;

ನತ್ವಾ ಶ್ರೀ ಭುವನೇಶ್ವರೀ ಹರಿಹರೌ
ಲಂಬೋದರಾದೀನ್ ದ್ವಿಜಾನ್
ಶ್ರೀ ಮಚ್ಛಾಜಹಾನ-ನರೇಂದ್ರಪರಮ ಪ್ರೀತಿ-ಪ್ರಸಾದಾಪ್ತಯೇ/
ಕೃತ್ವಾ ಸಂಸ್ಕೃತ ಪಾರಸೀಕರಚನಾಂ
ಭೇದಪ್ರದಂ ಕೌತುಕಂ
ಜ್ಯೋತಿಃ ಶಾಸ್ತ್ರಪದೋಪಯೋಗಿ ಸರಲಂ ವೇದಾಂಗರಾಯಃ ಸುಧೀಃ/

ಷಹಜಹಾನನ ಆಸ್ಥಾನ ಪಂಡಿತರೆಲ್ಲರನ್ನೂ ಮೀರಿಸುವಂತಹ ಪ್ರತಿಭಾನ್ವಿತ ಕವಿ ಜಗನ್ನಾಥ ಪಂಡಿತ. ಸಂಸ್ಕೃತ ಭಾಷಾ ಜಿಜ್ಞಾಸುವಾಗಿದ್ದ ದಾರಾಶಿಕೋನ ಅಧ್ಯಯನಕ್ಕಾಗಿಯೇ ಜಗನ್ನಾಥ ಪಂಡಿತನನ್ನು ಕಾಶಿಯಿಂದ ಕರೆಸಲಾಗಿತ್ತು. ದಾರಾಶಿಕೋನ ಸಂಸ್ಕೃತ ಪ್ರೇಮ ಅಗಾಧವಾಗಿದ್ದು ಅವನು ಪ್ರಮುಖ ಉಪನಿಷತ್ತುಗಳನ್ನು ಆಳವಾಗಿ ಅಭ್ಯಸಿಸಿ ಔಪನಿಖಟ್ ಎಂಬ ಹೆಸರಿನಲ್ಲಿ ಪರ್ಷಿಯನ್ ಭಾಷೆಗೆ ಅನುವಾದ ಮಾಡಿದ ವಿಚಾರ ಈ ಲೇಖನದ ಪೀಠಿಕೆಯಲ್ಲಿಯೇ ಸೂಚಿತವಾಗಿದೆ. ತನ್ನ ಪಾಂಡಿತ್ಯ-ವ್ಯಕ್ತಿತ್ವ ಎರಡರಿಂದಲೂ ಜನಮೆಚ್ಚುಗೆಗೆ ಪಾತ್ರನಾಗಿದ್ದ ದಾರಾ ಶಿಕೋ ಜಗನ್ನಾಥ ಪಂಡಿತನ ಅಚ್ಚುಮೆಚ್ಚಿನ ಶಿಷ್ಯನೂ ಆತ್ಮೀಯ ಗೆಳೆಯನೂ ಆಗಿದ್ದ.

ದಾರಾ ಶಿಕೋನ ಸದ್ಗುಣಗಳನ್ನು ವರ್ಣಿಸಲೆಂದೇ ಜಗಧಾಭರಣ ಎಂಬ ಕೃತಿಯನ್ನು ಜಗನ್ನಾಥ ಪಂಡಿತನು ರಚಿಸಿದ. ತನ್ನ ಕಿರಿಯ ಸೋದರ ಔರಂಗಜೇಬನ ಕುತಂತ್ರಕ್ಕೆ ಬಲಿಯಾಗಿ ದಾರುಣ ರೀತಿಯಲ್ಲಿ ದಾರಾ ಶಿಕೋ ಕೊಲೆಯಾದ. ಆ ಸಂದರ್ಭದಲ್ಲಿ ದಾರಾ ಶಿಕೋ ಭಗವದ್ಗೀತೆಯನ್ನು ಪರ್ಷಿಯನ್ ಭಾಷೆಗೆ ಅನುವಾದಿಸುವ ಸಿದ್ಧತೆಯಲ್ಲಿದ್ದ ಎಂದೂ ಸಹ ಪ್ರತೀತಿ ಇದೆ.

ಜಗನ್ನಾಥ ತನ್ನ ಜೀವಿತದ ಬಹುಭಾಗ ಷಹಜಹಾನನ ಆಶ್ರಯದಲ್ಲೇ ಕಳೆದ. 'ಭಾಮಿನೀ ವಿಲಾಸ' ಎಂಬ ಕೃತಿಯಲ್ಲಿ ಸ್ವತಃ ಜಗನ್ನಾಥನೇ ದಿಲ್ಲೀ ವಲ್ಲಭ ಪಾಣಿವತಲೆ ನೀತಂ ನವೀನಂ ವಯಃ ಎಂದು ಉದ್ಧರಿಸಿದ್ದಾನೆ. ವ್ಯಾಕರಣ ಶಾಸ್ತ್ರ ಗ್ರಂಥಗಳಲ್ಲಿಯೇ ಪ್ರಸಿದ್ಧ ಎನಿಸಿದ ಸಿದ್ಧಾಂತ ಕೌಮುದಿ ಕಾರ ಭಟ್ಟೋಜಿ ದೀಕ್ಷಿತರನ್ನು ಬಿಡದೆ ಖಂಡಿಸಿ 'ಮನೋರಮ ಕುಚಮರ್ದಿನಿ' ಬರೆದಿದ್ದಾನೆ. ರಸಗಂಗಾಧರ ಎಂಬುದು ಕಾವ್ಯಲಕ್ಷಣ ಗ್ರಂಥ. ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳಲ್ಲಿಯೇ ಇದೊಂದು ಮಹತ್ವಪೂರ್ಣವಾದ ಕೃತಿ. ಸಾಮಾನ್ಯವಾಗಿ ಭಾಮಹನಿಂದ ಪ್ರಾರಂಭಿಸಿ ನಂತರ ಬಂದಂತಹ ಅಲಂಕಾರಿಕರೆಲ್ಲರೂ ತಮ್ಮ ಲಕ್ಷಣಗಳಿಗೆ ಉದಾಹರಣೆಗಳನ್ನು ಬಹುಪಾಲು ಪ್ರಸಿದ್ಧ ಕಾವ್ಯಗಳಿಂದ ಆರಿಸಿಕೊಂಡಿದ್ದಾರೆ.

ಜಗನ್ನಾಥ ಪಂಡಿತನ ವಿಶೇಷ ಏನೆಂದರೆ ಇವನು ಬೇರೆಯವರ ಕೃತಿಗಳಿಂದ ಉಲ್ಲೇಖ ಎತ್ತಿಕೊಂಡಿಲ್ಲ. 'ರಸಗಂಗಾಧರ'ದಲ್ಲಿನ ಲಕ್ಷಣಗಳಿಗೆ ಇವನು ಕೊಡುವ ಉದಾಹರಣೆಗಳೆಲ್ಲವೂ ಇವನ ಸ್ವಂತ ರಚನೆಗಳೇ. ಕಿಂ ಸ್ಮರ್ಯತೇ?. ಸುಮನಸಾಂ ಮನಸಾಪಿ ಗಂಧಃ ಕಸ್ತೂರಿ ಕಾಜನನ ಶಕ್ತಿಭೃತಾ ಮೃಗೇಣ! ಎಂಬುದಾಗಿ ತನ್ನನ್ನು ಕಸ್ತೂರಿ ಮೃಗಕ್ಕೆ ಹೋಲಿಸಿಕೊಂಡಿದ್ದಾನೆ.

ಷಹಜಹಾನನ ಅನಂತರ ಹೆಚ್ಚು ಕಡಿಮೆ ಇದೇ ಕಾಲದವನಾದ ಲಾಡಖಾನ ಎಂಬ ಲೂದಿ ವಂಶದ ಮುಸಲ್ಮಾನ ದೊರೆಯ ಆಶ್ರಯದಲ್ಲಿ ಅನಂಗರಂಗ ಎಂಬ ಶೃಂಗಾರ ಗ್ರಂಥ ಕಲ್ಯಾಣ ವರ್ಮ ಎಂಬುವನಿಂದ ರಚಿತವಾಯಿತು. ಕ್ರಿಸ್ತ ಶಕ ಹದಿನೈದನೆಯ ಶತಮಾನದ ಪೂರ್ವಾರ್ಧದಲ್ಲಿ ಅಲಹಾಬಾದ್ ಸಮೀಪದ ಕಡಾ ಎಂಬಲ್ಲಿ ಆಳುತ್ತಿದ್ದ ಮಲಿಕ್-ಸುಲ್ತಾನ್-ಶಾಹಿ ಎಂಬ ದೊರೆಯು ಸಂಗೀತ ಶಾಸ್ತ್ರಕ್ಕೆ ಅಪಾರವಾದ ಸೇವೆ ಸಲ್ಲಿಸಿರುವನು. ಭಾರತೀಯ ಸಂಗೀತ ಪರಂಪರೆಗೆ ಅಪಾರ ಪ್ರೋತ್ಸಾಹವನ್ನು ಇತ್ತು ಇವನ ಆಶ್ರಯದಲ್ಲಿ ಸಂಗೀತಕ್ಕೆ ಸಂಬಂಧಿಸಿದ ಸಂಸ್ಕೃತ ಗ್ರಂಥಗಳ ಸಂಗ್ರಹಣ ಕಾರ್ಯ ಯಶಸ್ವಿಯಾಗಿ ನಡೆಯಿತು.

ಆ ಸಂದರ್ಭದಲ್ಲಿ ಅವನ ಆಶ್ರಯದಲ್ಲಿ ಸಮಾವೇಶಗೊಂಡ ಸಂಗೀತ ವಿದ್ವಾಂಸರ ಶ್ರಮದ ಫಲ ಹಾಗೂ ಸುಲ್ತಾನ್ ಶಾಹಿಯ ಪ್ರೋತ್ಸಾಹದ ಫಲವಾಗಿ 'ಸಂಗೀತ ಶಿರೋಮಣಿ' ಎಂಬ ಗ್ರಂಥವೊಂದು ಸಂಸ್ಕೃತ ಭಾಷೆಯಲ್ಲಿ ರಚಿತವಾಯಿತು. ಮಲಿಕ್ -ಸುಲ್ತಾನ್-ಶಾಹಿಯ ಸಮಕಾಲೀನನೇ ಆಗಿದ್ದ ಕಾಶ್ಮೀರದ ದೊರೆ 'ಜಯಿನುಲ್ -ಅಬಿದಿನ್' ಸಂಸ್ಕೃತ ಸಾಹಿತ್ಯದ ಬಗ್ಗೆ ಸಾಕಷ್ಟು ಗೌರವ ಆದರಗಳನ್ನು ಹೊಂದಿದ್ದ. ಶ್ರೀವರ ಕವಿ ಎಂಬ ಪಂಡಿತನಿಂದ ರಚಿತವಾದ ರಾಜತರಂಗಿಣಿ ಎಂಬ ಕೃತಿಯಲ್ಲಿ ಈ ಮಹಮ್ಮದೀಯ ರಾಜನ ಸಂಸ್ಕೃತ ಅಭಿಮಾನದ ಬಗ್ಗೆ ಮಾಹಿತಿ ಇದೆ.

ಕಲ್ಹಣನ ರಾಜತರಂಗಿಣಿಯೇ ಬೇರೆ ಈ ಕೃತಿಯೇ ಬೇರೆ. ಮೂಶಾಖಾನನೆಂಬ ದೊರೆಯ ಆಶ್ರಯದಲ್ಲಿ ಮಥುರೇಶನೆಂಬ ಕವಿಯಿಂದ ಶಬ್ದ ರತ್ನಾವಳಿ ಎಂಬ ಶಬ್ಧ ಕೋಶ ಗ್ರಂಥ ರಚಿತವಾಗಿದ್ದು ಈ ಕೃತಿಯು ಪಂಜಾಬ್ ಸಂಸ್ಕೃತ ಗ್ರಂಥ ಮಾಲೆಯ ಆಶ್ರಯದಲ್ಲಿ ಪ್ರಕಟವಾಗಿದೆ. ಸಣ್ಣ ಪ್ರಾಂತ್ಯಗಳನ್ನು ಆಳುತ್ತಿದ್ದ ಹಲ ಕೆಲವು ಮಹಮ್ಮದೀಯ ದೊರೆಗಳ ಆಶ್ರಯದಲ್ಲಿಯೂ ಸಹ ಸಂಸ್ಕೃತ ಗ್ರಂಥಗಳು ರಚಿತವಾಗಿದ್ದು ಅತಿ ವಿಸ್ತಾರದ ಭಯದಿಂದ ಅವುಗಳ ಮಾಹಿತಿಯನ್ನು ಕೈ ಬಿಡಲಾಗಿದೆ. ಕಾಶ್ಮೀರವನ್ನು ಆಳಿದ ಅನೇಕ ಮಹಮ್ಮದೀಯ ದೊರೆಗಳ ಗೋರಿಗಳಲ್ಲಿ ಸಂಸ್ಕೃತ ಶಾಸನಗಳು ಇವೆ.

ಹೀಗೆ ಸಮ ದೃಷ್ಟಿಯುಳ್ಳವರೂ, ಗುಣಗ್ರಾಹಿಗಳೂ, ವಿಮತ್ಸರರೂ ಆಗಿದ್ದ ಅಕ್ಬರನೇ ಮೊದಲಾದ ಮಹಮ್ಮದೀಯ ಬಾಂಧವರು ಸಂಸ್ಕೃತ ಸಾಹಿತ್ಯದ ಪೋಷಣೆಗೆ ಸಾಕಷ್ಟು ನೀರೆರೆದು ಆ ಮೂಲಕ ಅನೇಕ ಕೃತಿಕುಸುಮಗಳನ್ನು ಅರಳಿಸಿದ್ದಾರೆ. ಅಪೂರ್ವ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಮುಟ್ಟಿಸಿದ ಕವಿಗಳಿಗೆ, ವಿದ್ವಾಂಸರಿಗೆ ಆಶ್ರಯವಿತ್ತು, ಆ ಮೂಲಕ ಸಂಸ್ಕೃತ ಸರಸ್ವತಿಯ ಸೇವೆಯನ್ನು ತಮ್ಮದೇ ಆದ ರೀತಿಯಲ್ಲಿ ಸಲ್ಲಿಸಿದ್ದಾರೆ. ಆ ಕವಿಗಳಂತೆಯೇ ಇವರೂ ಕೂಡ ಜರಾ-ಮರಣಗಳ ಭಯವಿಲ್ಲದ ಯಶಃಕಾಯವುಳ್ಳವರಾಗಿದ್ದಾರೆ.

* * *

ನಾನು ಮದುವೆಯಾಗುವತನಕ ನಿಜವಾದ ಸಂತೋಷವೇನೆಂಬುದು ಗೊತ್ತಿರಲಿಲ್ಲ. ಆದರೆ ಗೊತ್ತಾಗುವ ವೇಳೆಗೆ ಕಾಲ ಮಿಂಚಿತ್ತು!

-ಚೇಣಾ ಗಾದೆ

ಅಮೆರಿಕಾದ ರಾಕ್‌ಫೆಲ್ಲರ್‌ಗಿಂತ ಭಾರತದ ರಾಕ್‌ಫೆಲ್ಲರ್‌ರು ಉತ್ತಮರೇನಲ್ಲ

–ಡಾ|| ಜಿ. ರಾಮಕೃಷ್ಣ

ನಮ್ಮ ದೇಶ ಅನೇಕ ವಿಪರ್ಯಾಸಗಳ ಕಗ್ಗಂಟು. ಆದ್ದರಿಂದಲೇ ನಮ್ಮನ್ನು ನಾವು ಅರ್ಥೈಸಿಕೊಳ್ಳುವಾಗ ಪರಸ್ಪರ ವಿರೋಧಿ ನಿಲುವುಗಳನ್ನು ಎದುರಿಸಬೇಕಾಗುತ್ತದೆ. ಆದರೆ ವಿರೋಧಗಳು ಇಲ್ಲವೇನೋ ಎಂಬ ರೀತಿಯಲ್ಲಿ ಸಮನ್ವಯದ ಮಾತನ್ನೂ ಆಡುತ್ತೇವೆ. ಗಾಂಧೀಜಿ ಬಗೆಗಿನ ಧೋರಣೆಯಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಬಹುದು. ಅವರ ಯಾವ ಅಭಿಪ್ರಾಯಕ್ಕೂ ಪ್ರಾಯೋಗಿಕವಾಗಿ ಮನ್ನಣೆ ನೀಡದೆ ಯಾಂತ್ರಿಕವಾಗಿ ಅವರ ಹೆಸರನ್ನು ಉಚ್ಚರಿಸುವ ಪದ್ಧತಿ ನಮ್ಮಲ್ಲಿ ವ್ಯಾಪಕವಾಗಿ ಹರಡಿದೆ. ಆದ್ದರಿಂದ ಇದ್ದಕ್ಕಿದ್ದಂತೆ ನಮ್ಮೊಂದು ರಾಜಕೀಯ ಪಕ್ಷವು 'ಗಾಂಧೀಪ್ರಣಿತ ಸಮಾಜವಾದ' ತನ್ನ ಧ್ಯೇಯವೆಂದು ಘೋಷಿಸಿಕೊಡು ಜನರ ಮನಸ್ಸನ್ನು ಆಕ್ರಮಿಸಲು ಮುಂದಾಗಬಹುದು ಅಥವಾ ಮಹಾತ್ಮ ಗಾಂಧೀಜಿಯ ಧಾರ್ಮಿಕ ನಂಬಿಕೆಯನ್ನು ಒಂದು ಮತೀಯ ಪ್ರಣಾಳಿಕೆಯನ್ನಾಗಿ ಮಾರ್ಪಡಿಸಿಕೊಳ್ಳಬಹುದು.

ಆ ವ್ಯಕ್ತಿ ಯಾರಿಗೆ ಹೇಗೆ ಬೇಕೊ ಹಾಗೆ ವ್ಯಾಖ್ಯಾನಿಸಿಕೊಳ್ಳಲು ಅಗತ್ಯವಾದ ಭವ್ಯ ಮೂರ್ತಿಯಾಗಿ ಪರಿವರ್ತನೆ ಹೊಂದಿದ್ದಾನೆ. ಅದು ಆತನಿಗೆ ಸಲ್ಲುವ ಮರ್ಯಾದೆಯೋ ಅಥವಾ ಆತನನ್ನು ಬಂಡವಾಳನ್ನಾಗಿ ಮಾಡಿಕೊಳ್ಳುವ ಹುನ್ನಾರವೋ ಎಂಬುದನ್ನು ಸಹ ಗಂಭೀರವಾಗಿ ಚರ್ಚಿಸುವ ಮನೋಭೂಮಿಕೆ ಕ್ರಮೇಣ ನಮ್ಮಲ್ಲಿ ಕುಗ್ಗಿಹೋಗುತ್ತಿದೆ. 'ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮಬಲ ಒಂದಿದ್ದರೆ ಸಾಕೋ ಎಂದು ಗಾಂಧೀಜಿಗೆ ಹೇಳಬಹುದಾದ ಸನ್ನಿವೇಶ ಉಂಟಾಗಿರುವುದು ಆತನಿಂದ ನಾವೆಷ್ಟು ದೂರ ಸರಿದಿದ್ದೇವೆ ಎಂಬುದರ ದ್ಯೋತಕವೆನಿಸುತ್ತದೆ.

ಜಾಗತೀಕರಣದ ಆರಾಧಕರು ನಮ್ಮ ದೇಶದ ಆರ್ಥಿಕ ನೀತಿ ಮತ್ತು ಪರಿಪ್ರೇಕ್ಷ್ಯಗಳನ್ನು ಮೂಲಭೂತವಾಗಿ ಬದಲಾಯಿಸುವಾಗ ಕೂಡ ಗಾಂಧೀಜಿಗೆ ಯಾವ ಅಪಚಾರವನ್ನೂ ಎಸಗಿಲ್ಲ ಎಂಬಂತೆ ವಿವರಣೆ ನೀಡುವುದು ಅಪರೂಪವೇನಲ್ಲ. ಆರ್ಥಿಕ ಸ್ವಾವಲಂಬನೆಯ ಪ್ರಸ್ತಾಪ ಮಾಡುವುದು ಕೂಡ ಅಸಂಪ್ರದಾಯಿಕ ಎಂಬಷ್ಟು ಮಟ್ಟಿಗೆ ನಮ್ಮ ದೇಶವು ಜಾಗತೀಕರಣವೆಂಬ ದೈತ್ಯ ಮರೀಚಿಕೆಯ ಬೆಂಬತ್ತಿದೆ.

ರಾಷ್ಟ್ರೀಯ ಸಂಪತ್ತು ಮತ್ತು ಶ್ರಮದ ಫಲದ ಬಗ್ಗೆ ಗಾಂಧೀಜಿ ನಿರೀಕ್ಷಿಸಿದ್ದು ಏನೆಂಬುದನ್ನು ಸಮಗ್ರವಾಗಿ ವಿಶ್ಲೇಷಿಸಿಕೊಳ್ಳುವಷ್ಟು ವಿವೇಚನೆ ಕೂಡ ನಮ್ಮ ದೇಶದ ಅನೇಕ ಆರ್ಥಿಕ ಪರಿಣತರಿಗೆ ಅಸಹನೀಯವಾಗಿ ತೋರುತ್ತದೆ. ನಮ್ಮ ನೈಸರ್ಗಿಕ

ಮತ್ತು ಮಾನವ ಸಂಪನ್ಮೂಲ ಸಾಧಿಸಬೇಕೆಂಬ ಅತಿ ಸಾಮಾನ್ಯ ಆರ್ಥಿಕ ಸೂತ್ರವು ಅವರಿಗೆ ಅಪಥ್ಯವಾಗಿ ತೋರುತ್ತದೆ.

ದೇಶದ ಮಾನವ ಸಂಪನ್ಮೂಲವನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳದಿರುವ ಸಂದರ್ಭವು ಹೇಗೆ ತಾನೆ 'ಅಭಿವೃದ್ಧಿ ಎನಿಸಿಕೊಳ್ಳಲು ಅರ್ಹವಾದೀತು? ಅಂತೆಯೇ, ನಮ್ಮ ನೈಸರ್ಗಿಕ ಸಂಪತ್ತನ್ನು ಪರಭಾರೆ ಮಾಡುತ್ತಾ ಹೋದರೆ 'ಸರ್ವೋದಯ' ಆವಿರ್ಭಾವವಾಗುವುದಾದರೂ ಹೇಗೆ? ದೇಶದಲ್ಲಿ ಕಟ್ಟಕಡೆಯ ಮನುಷ್ಯ ಹೇಗೆ ಬದುಕುತ್ತಾನೆ ಎಂಬುದು ನಮ್ಮ ಇಡೀ ಆರ್ಥಿಕ ವ್ಯವಸ್ಥೆಯ ಮಾಪನಕ್ಕಿರುವ ಏಕೈಕ ಸಾಧನ. ಜಾನ್ ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವು ತಮ್ಮನ್ನು ಸಂಪೂರ್ಣವಾಗಿ ಬದಲಾಯಿಸಿತೆಂದು ಹೇಳುವ ಗಾಂಧೀಜಿ ಆ ಗ್ರಂಥದಲ್ಲಿ ಕಂಡುಕೊಂಡ ಮೊದಲ ಸತ್ಯ ಎಂದರೆ 'ಒಬ್ಬ ವ್ಯಕ್ತಿಯ ಹಿತವು ಇಡೀ ಸಮಷ್ಟಿಯ ಹಿತದಲ್ಲಿ ಅಡಗಿದೆ' ಎಂಬುದು. ನಮ್ಮ ಆರ್ಥಿಕತೆಯು ಅನರ್ಥದ ಹಾದಿಯಲ್ಲಿ ಸಾಗುತ್ತಿದೆಯೇ, ಇಲ್ಲವೇ ಎಂಬ ಪ್ರಶ್ನೆಗೆ ಉತ್ತರ ಬೇಕಾದರೆ ಗಾಂಧೀಜಿಯ ಈ ಸೂತ್ರದ, ಒರೆಗಲ್ಲಿಗೆ ಹಚ್ಚಿ ನೋಡುವ ಅವಶ್ಯಕತೆ ಇದೆ. ವಸಾಹತುದಾರನಿಗೆ ಭಾರತ ಬಿಟ್ಟು ತೊಲಗು ಎಂದು ಹೇಳಿದ ಗಾಂಧೀಜಿಯ ಆಶಯ ಸಹ ಚೆನ್ನಾಗಿ ಮನದಟ್ಟಾಗುವುದು ಆಗಲೇ.

ಮೀರಾ ಎಂಬ ಹೆಸರನ್ನಿಟ್ಟುಕೊಂಡಿರುವ ಮ್ಯಾಡಲಿನ್ ಸ್ಲೇಡ್ ಮುಖಾಂತರ ೧೯೩೧ರ ನವೆಂಬರ್‌ನಲ್ಲಿ ರೋಮ ರೋಲಾ ಗಾಂಧೀಜಿಗೆ ಒಂದು ಪತ್ರ ಕಳಿಸಿದ್ದರು. ಆಗ್ಗೆ ಗಾಂಧೀಜಿ ಲಂಡನ್ನಿನಲ್ಲಿದ್ದರು, ಅಂದಿನ ಅಂತರ್‌ರಾಷ್ಟ್ರೀಯ ಆರ್ಥಿಕ ಸಂದರ್ಭವನ್ನು ರೋಲ ವಿವರಿಸಿದ್ದುಹೀಗೆ:

ನಮ್ಮ (ಅಂದರೆ ಸ್ವಾತಂತ್ರ್ಯದ ಅಭಿಲಾಷೆಯನ್ನು ಇರಿಸಿಕೊಂಡಿರುವ ದೇಶಗಳ) ವೈರಿಯು ಕೇವಲ ಒಬ್ಬ ವಿದೇಶಿ ಯಜಮಾನನಲ್ಲ. ಅಥವಾ ಒಬ್ಬ ರಾಷ್ಟ್ರೀಯ ಯಜಮಾನನೂ ಅಲ್ಲ. ನಿಜವಾದ ವೈರಿಯೆಂದರೆ ಬಂಡವಾಳದ ಆಸಕ್ತಿಗಳು ಮತ್ತು ಉದ್ಯಮಗಳು. ಅವು ಅಂತರ್‌ರಾಷ್ಟ್ರೀಯವಾಗಿ ಒಂದು ಜಾಲವನ್ನು ನಿರ್ಮಿಸಿಕೊಂಡಿವೆ. ಅನೇಕ ದೇಶಗಳ ಭಾರಿ ಔದ್ಯಮಿಕ ಮತ್ತು ವಾಣಿಜ್ಯ ಲಾಭಕೋರರ ಕೂಟವು ಇಡೀ ವಿಶ್ವದ ಮೇಲೆ ತನ್ನ ಬಲೆಯನ್ನು ಬೀಸಿದೆ. ಕೆಲವೊಮ್ಮೆ ಮೇಲ್ನೋಟಕ್ಕೆ ವಿರೋಧಿಗಳಂತೆ ಕಾಣುವ ದೇಶಗಳು ಈ ಕೂಟದಲ್ಲಿ ಯಾವ ವಿರೋಧಗಳೂ ಇಲ್ಲದಂತೆ ಸಮ್ಮಿಳಿತವಾಗಿವೆ. ಮುಂದುವರಿದು ಅವರೆಂದರು: 'ರಾಜಕೀಯದ ಗುಪ್ತ ನೇತಾರರು ಹಾಗೂ ಗುಮಾನಿ ಹುಟ್ಟಿಸುವ ಅಂತರ್‌ರಾಷ್ಟ್ರೀಯ ವ್ಯಾಪಾರಿಗಳು ತಮ್ಮ ಲಾಭ ಮತ್ತು ಮೇಲುಗೈಗಳನ್ನು ಶಾಂತಿಯ ಸಮಯದಲ್ಲೂ ಸ್ಥಾಪಿಸಿಕೊಳ್ಳುತ್ತಾರೆ. ಯುದ್ಧದ ಸಂದರ್ಭದಲ್ಲೂ ರಕ್ಷಿಸಿಕೊಳ್ಳುತ್ತಾರೆ.'

ಜಾಗತೀಕರಣ, ವಿಶ್ವ ವ್ಯಾಪಾರ ಸಂಸ್ಥೆಯ ನಿರ್ಬಂಧಗಳು, ಇತ್ತೀಚೆಗಷ್ಟೇ ಮುಕ್ತಾಯವಾದ ಕ್ಯಾನ್‌ಕನ್ ಸಮಾವೇಶದ ಫಲಶ್ರುತಿ ಇತ್ಯಾದಿಗಳ ಮೂಲಾರ್ಥವನ್ನು

ಗ್ರಹಿಸಲು ರೋಲಾ ಅವರ ಸಂಕ್ಷಿಪ್ತ ಹೇಳಿಕೆಯು ಸಹಾಯ ಮಾಡುತ್ತದೆ.

ಕರ್ನಾಟಕದಲ್ಲಿ ಕೆಲವು ರೈತರು ಸಾಲದ ಹೊರೆಯಿಂದ ಕಂಗಾಲಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು ಸರ್ಕಾರ ಅವರ ಕುಟುಂಬಕ್ಕೆ ನೀಡುವ ಒಂದು ಲಕ್ಷ ರೂಪಾಯಿಗಳ ಆಮಿಷದಿಂದಲ್ಲ. ಜಾಗತೀಕರಣದ ದುರ್ಭರ ಹೊಡೆತದಿಂದ ಎಂಬುದು ಇದರಿಂದ ಸುಲಭವಾಗಿ ತಿಳಿಯುತ್ತದೆ. ನಮ್ಮ ಆರ್ಥಿಕ ವ್ಯವಸ್ಥೆಯನ್ನು ಸಂಘಟಿಸುವಾಗ ಗಾಂಧೀಜಿಗೇನಾದರೂ ಪ್ರಸ್ತುತತೆ ಉಳಿಯಬೇಕಾದರೆ ನಾವು ಮಾಡಬೇಕಾದದ್ದು ಇಷ್ಟೆ:

ನಮ್ಮ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಅವಕಾಶವೇ ಇಲ್ಲದಂತೆ ವಿದೇಶಿ ಸರಕುಗಳನ್ನು ತುಂಬಿಕೊಳ್ಳುವ ಪ್ರವೃತ್ತಿಯನ್ನು ಕೊನೆಗಾಣಿಸುವುದು. ನಮ್ಮ ಸಂಪತ್ತನ್ನು ರೂಢಿಸಿಕೊಳ್ಳಲು ಇರುವ ಗರಿಷ್ಠ ಸಾಧ್ಯತೆಗಳನ್ನು ಮೀರಿ ಬೆಳೆಯಹೊರಡುವುದು ವಿವೇಕವಲ್ಲ. ಅದು ಅಮೇರಿಕಾ, ಸ್ವಿಡನ್ನಿನಂತಹ ದೇಶಗಳ ಅನುಕರಣೆ ಆಗುತ್ತದೆ ಅಷ್ಟೆ. ಆ ದೇಶಗಳ ಆರ್ಥಿಕ ಬೆನ್ನೆಲುಬು ಮಿಲಿಟರಿ ಸಾಮಗ್ರಿಗಳ ತಯಾರಿಕೆ ಮತ್ತು ಮಾರಾಟ. ಅಲ್ಲಿಯ ಕೊಳ್ಳುಬಾಕ ಸಂಸ್ಕೃತಿಯನ್ನು ನಮ್ಮಲ್ಲಿ ಅಂಕುರಿಸುವಂತೆ ಮಾಡುವ ಪ್ರಯತ್ನವು ದೇಶದ ಬಹಳ ಕಡಿಮೆ ಪ್ರಮಾಣದ ಜನರನ್ನು ಮಾತ್ರ ಮುಟ್ಟಬಲ್ಲದು. ಪ್ರಕೃತಿಯು ಎಲ್ಲರಿಗೂ ಸಾಕಾಗುವಷ್ಟನ್ನು ನೀಡಬಲ್ಲದು. ಆದರೆ ಬೇಕು ಬೇಕೆಂದಿದ್ದನ್ನೆಲ್ಲಾ ಪೂರೈಸಲಾರದು ಎಂಬ ಎಚ್ಚರಿಕೆ ನೀಡಿದ ಗಾಂಧೀಜಿಯ ಇಂಗಿತ ಇದೇ ಆಗಿದೆ. ಕಳೆದ ಒಂದು ದಶಕದ ನಮ್ಮ ಆರ್ಥಿಕ ನೀತಿಗಳು ಇದಕ್ಕೆ ವ್ಯತಿರಿಕ್ತವಾದ ಆಯಾಮಗಳನ್ನು ಪ್ರಮುಖವಾಗಿಸಿರುವುದು ಜನಕ್ಕೆ ದುರಂತಮಯವಾಗಿ ಪರಿಣಮಿಸಿದೆ. ಸರ್ವೋದಯದ ಆದರ್ಶದ ಜಾಗದಲ್ಲಿ ನಾವು ಪುರಸ್ಕರಿಸಿರುವ ತತ್ತ್ವ 'ಹಿಂದುಳಿದಿರುವವನನ್ನು ದೆವ್ವ ಹೊತ್ತೊಯ್ಯಲಿ' ಎಂಬುದಾಗಿದೆ. ಆದರೂ ಸಂಕೋಚವಿಲ್ಲದೆ ಗಾಂಧೀಜಿಯ ತತ್ತ್ವಗಳನ್ನು ಆಚರಿಸುತ್ತಿದ್ದೇವೆಂದು ಸರ್ಕಾರದ ವಕ್ತಾರರು ಹೇಳಿಕೊಳ್ಳುತ್ತಾರೆ ಮತ್ತು ಜನ ಅವರಿಗೆ ಛೀಮಾರಿ ಹಾಕುವುದಿಲ್ಲ!

ಬಂಡವಾಳವನ್ನು ತೊಡಗಿಸಿರುವವರು ಸಮಾಜದ ಧರ್ಮದರ್ಶಿಗಳಾಗಿ ನಡೆದುಕೊಂಡರೆ ಆಂತರಿಕ ವೈರುಧ್ಯಗಳ ಪರಿಹಾರ ಆಗುತ್ತದೆ ಎಂದು ಗಾಂಧೀಜಿ ಹೇಳಿದ್ದರೆಂದು ಅವರ ಮಾತುಗಳನ್ನು ಆಗಾಗ್ಗೆ ಉದ್ಧರಿಸುವುದು ನಮ್ಮ ಆರ್ಥಿಕ ತಜ್ಞರಿಗೆ ಇಂದು ಅನುಕೂಲಸಿಂಧುವಾಗಿ ಪರಿಣಮಿಸಿದೆ. ಉತ್ತರ ಪ್ರಾಂತ್ಯಗಳ ಕೆಲವು ಜಮೀನ್ದಾರರು ಗಾಂಧೀಜಿಯವರನ್ನು ಭೇಟಿಯಾದಾಗ ಅವರಿಗೆ ನೀಡಲಾದ ಆಶ್ವಾಸನೆ ಇದು: ನ್ಯಾಯಸಮ್ಮತವಾದ ಕಾರಣವಿಲ್ಲದೆ ಆಸ್ತಿವಂತರ ವರ್ಗವನ್ನು ಅವರ ಖಾಸಗಿ ಆಸ್ತಿಯಿಂದ ವಿವಂಚಿತರಾಗಿಸುವ ಕಾರ್ಯಕ್ಕೆ ನಾನು ಭಾಗಿಯಾಗಿರುವುದಿಲ್ಲ. ವರ್ಗ ಸಂಘರ್ಷವನ್ನು ತಪ್ಪಿಸಲು ನನ್ನೆಲ್ಲ ಪ್ರಭಾವವನ್ನು ನಿಮ್ಮ ಪರವಾಗಿ ಬಳಸುತ್ತೇನೆಂಬುದಾಗಿ ನೀವು ನನ್ನಲ್ಲಿ ನಂಬಿಕೆಯನ್ನು ಇರಿಸಿಕೊಳ್ಳಬಹುದು. ಅನ್ಯಾಯವಾದ ಮಾರ್ಗದಲ್ಲಿ ನಿಮ್ಮ ಆಸ್ತಿಯಿಂದ ನಿಮ್ಮನ್ನು

ವಂಚಿತರನ್ನಾಗಿಸುವಂಥ ಪ್ರಯತ್ನ ಏನಾದರೂ ನಡೆದಲ್ಲಿ, ನಿಮ್ಮ ಪರವಾಗಿ ನಾನು ಹೋರಾಟಕ್ಕೆ ನಿಲ್ಲುವುದನ್ನು ನೀವು ಕಾಣುತ್ತೀರಿ . ಇಂತಹ ಬೇರೆ ಮಾತುಗಳನ್ನೂ ಗಾಂಧೀಜಿಯವರು ಹೇಳಿರುವುದುಂಟು.

ಉದಾಹರಣೆಗೆ ೧೯೨೧ರ ಅಸಹಕಾರ ಚಳವಳಿಯ ಸಂದರ್ಭದಲ್ಲಿ ಅವರು ಹೇಳಿದರು: ಅಸಹಕಾರ ಆಂದೋಲನದ ಯಾವುದೇ ಹಂತದಲ್ಲಿ ಜಮೀನುದಾರರನ್ನು ಅವರ ಕಂದಾಯದಿಂದ ವಂಚಿತರಾಗಿಸಬೇಕೆಂಬ ಆಲೋಚನೆಯನ್ನೇನೂ ನಾವು ಇರಿಸಿಕೊಂಡಿಲ್ಲ. ಈ ರೀತಿಯ ಬೆಂಬಲ ಪಡೆದ ಯಾವ ಬಂಡವಾಳಿಗ ಅಥವಾ ಭೂಮಾಲೀಕ ಧರ್ಮದರ್ಶಿಯಾಗಿ ವರ್ತಿಸಿದ್ದಾನೆಂಬ ಪ್ರಶ್ನೆಯನ್ನು ಗಾಂಧೀಜಿಯ ಅನುಯಾಯಿಗಳು ಅನಿವಾರ್ಯವಾಗಿ ಎದುರಿಸಬೇಕಾಗಿದೆ. ಅದನ್ನು ಎದುರಿಸಲು ಸ್ವತಃ ಗಾಂಧೀಜಿ ಮಾರ್ಗ ತೋರಿಸಿದ್ದಾರೆ. ೧೯೩೧ರ ಡಿಸೆಂಬರ್‌ನಲ್ಲಿ ಗಾಂಧೀಜಿ ಫ್ರಾನ್ಸಿಗೆ ತೆರಳಿ ರೋಮಾ ರೋಲಾ ಅವರೊಡನೆ ಕೆಲಕಾಲ ತಂಗಿದ್ದರು. ಆ ದಿನಗಳಲ್ಲಿ ಅವರಿಬ್ಬರೂ ಹಲವು ವಿಷಯಗಳನ್ನು ಸುದೀರ್ಘವಾಗಿ ಚರ್ಚಿಸುತ್ತಿದ್ದರು. ರೋಲಾ ಬರೆದಿಟ್ಟ ದಿನಚರಿಯ ಪ್ರಕಾರ ಡಿಸೆಂಬರ್ ೯ ರಂದು ಸಂಭಾಷಣೆಯಲ್ಲಿ ಗಾಂಧೀಜಿ ನುಡಿದ ಮಾತುಗಳಿವು:

'ದುಂಡುಮೇಜಿನ ಸಭೆಯಲ್ಲಿ ನಾನು ಹೇಳಿದ್ದನ್ನು ತಿರುಚಲಾಗುತ್ತಿದೆ. ನಾನು ಹೇಳಿದ್ದುದನ್ನು ಈಗ ಮತ್ತೆ ಹೇಳುತ್ತೇನೆ: ಸಧ್ಯದಲ್ಲಿ ಅಸ್ತಿತ್ವದಲ್ಲಿರುವ ಯಾವ ಹಿತಾಸಕ್ತಿಗಳನ್ನೂ ತುಂಡರಿಸುವ ಉದ್ದೇಶ ನಮಗಿಲ್ಲ. ಆದರೆ ರಾಷ್ಟ್ರೀಯ ಹಿತಾಸಕ್ತಿಗೆ ವಿರೋಧವಾಗಿದ್ದರೆ ಅಥವಾ ಕಾನೂನುಬಾಹಿರವಾಗಿದ್ದರೆ ಅವನ್ನು ಖಂಡಿತ ನಾವು ತಡೆಗಟ್ಟಬೇಕಾಗುತ್ತದೆ. ರಾಷ್ಟ್ರೀಯ ಕಾಂಗ್ರೆಸ್ ಸರ್ಕಾರದ ಚುಕ್ಕಾಣಿ ಹಿಡಿದಾಗ ಯಾವುದೇ ಕಾನೂನುಬಾಹಿರ ವಹಿವಾಟನ್ನೂ ಸಹಿಸುವುದಿಲ್ಲ. ಅದು ಕಾನೂನಿನ ಅನ್ವಯವಾಗಿಯೇ ಇದ್ದರೂ ರಾಷ್ಟ್ರೀಯ ಹಿತಕ್ಕೆ ಮಾರಕವಾಗಿದ್ದರೆ ಅದನ್ನು ಪ್ರಭುತ್ವವು ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಇದು ಭಾರತೀಯರಿಗೂ ಅನ್ವಯಿಸುತ್ತದೆ, ಯೂರೋಪಿಯನ್ನರಿಗೂ ಅನ್ವಯಿಸುತ್ತದೆ.'

ಭಾರತ ಅಲ್ಯೂಮಿನಿಯಂ ಕಂಪನಿ, ಮಾರುತಿ ಉದ್ಯೋಗ, ಮುಂತಾದುವನ್ನು ಖಾಸಗಿಯವರಿಗೆ ಬೇಕಾಬಿಟ್ಟಿ ಮಾರಿರುವುದು ಎಷ್ಟರಮಟ್ಟಿಗೆ ಸಮರ್ಥನೀಯ ಎಂಬುಒಕ್ಕೆ ಗಾಂಧೀಜಿ ಉತ್ತರ ಅವರ ಮಾತುಗಳಲ್ಲೇ ಅಡಗಿದೆ. ಅಂತೆಯೇ ಮಾನ್‌ಸ್ಯಾಟೋ, ಕಾರ್ಗಿಲ್ ಮುಂತಾದ ಕಂಪನಿಗಳಿಗೆ ನಮ್ಮ ಕೃಷಿಗೆ ಅಗತ್ಯವಾದ ಬೀಜಗಳ ವಹಿವಾಟನ್ನು ಬಿಟ್ಟುಕೊಟ್ಟಿರುವುದು ಎಂತಹ ಹೀನ ಅಪರಾಧ ಎಂಬದೂ ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ.ಬೇರೆ ಮಾತುಗಳಲ್ಲಿ ಹೇಳುವುದಾದರೆ, ಜಾಗತೀಕರಣದ ವಿಪತ್ಕಾರಕ ಪ್ರಕ್ರಿಯೆಗಳಗೆ ಸೊಪ್ಪು ಹಾಕುವುದು ರಾಷ್ಟ್ರೀಯಹಿತದ ಸಾಧನೆಯಲ್ಲ ಎಂಬುದು ಗಾಂಧಿಜಿಯ ನಿಖರವಾದ ಅಭಿಪ್ರಾಯ.

'ಗಾಂಧಿಸಮಾಜವಾದ ಅಧ್ವರ್ಯುಗಳೆಂದು ತಮ್ಮನ್ನು ತಾವು ಬಣ್ಣಿಸಿಕೊಳ್ಳುವ ಕೇಂದ್ರದ ಆಡಳಿತ ಪಕ್ಷದ ಮುತ್ಸದ್ದಿಗಳು ಇದನ್ನು ಗಮನಿಸುವ

ಸೌಜನ್ಯ ತೋರುತ್ತಾರೆಂಬ ಭ್ರಮೆ ಬೇಡ. ಅವರಿಗೆ ಅಮೇರಿಕದ ದೊಡ್ಡಣ್ಣನ ಮಾತೇ ವೇದವಾಕ್ಯ. ನಮ್ಮ ದೇಶ ಆತ್ಮಾವಲೋಕನ ಮಾಡಿಕೊಳಬೇಕಾದ ಪರ್ವ ಕಾಲ ಇದು.

ಗಾಂಧೀಜಿ ಬೃಹತ್ ಕೈಗಾರಿಕೆಗಳ ವಿರೋಧಿ ಆಗಿದ್ದರೆಂಬ ಇನ್ನೊಂದು ಐತಿಹ್ಯವಿದೆ. ಅವರ 'ಹಿಂದ್ ಸ್ವರಾಜ್, ಗ್ರಂಥವನ್ನು ಆಧಾರವಾಗಿ ಉಲ್ಲೇಖಿಸುವ ನವ್ಯೋತ್ತರ ವಿದ್ವಾಂಸರು ಈಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದಾರೆ ಆಸ್ಟ್ರಿಯಾದ ಸ್ಟೆಫಾನ್ ಜ್ವಾಶಗ್‌ಗೆ ರೋಮ ರೋಲಾ ೧೯೩೧ರ ಡಿಸೆಂಬರ್ ೩೦ ರಂದು ಬರೆದ ಪತ್ರದಲ್ಲಿ ಈ ವಿಷಯವನ್ನು ಚರ್ಚಿಸಲಾಗಿದೆ. ಐದು ದಿನಗಳಕಾಲ ಅವರೊಟ್ಟಿಗಿದ್ದ ಗಾಂಧೀಜಿ ಆ ವೇಳೆಗೆ ಸ್ವದೇಶಕ್ಕೆ ಹಿಂದಿರುಗಿದ್ದರು. ರೋಲಾ ಹೆಳತ್ತಾರೆ: 'ಯಂತ್ರಗಳ ಬಗ್ಗೆ ಗಾಂಧೀಜಿಯ ತಥಾಕಥಿತ ಅಭಿಪ್ರಾಯಗಳು ಪ್ರಚಲಿತವಾಗಿವೆ. ಅವರ ನಿಲುವನ್ನು ಎಂದೂ ಸರಿಯಾಗಿ ಅರಿತುಕೊಳ್ಳದೆ ಮಾಧ್ಯಮಗಳು ಹುಟ್ಟುಹಾಕಿರುವ ಕಲ್ಪನೆಗಳು ಅವು. ಇಂದಿನ ಗಾಂಧೀಜಿ ಯಂತ್ರಗಳನ್ನಾಗಲಿ, ಔದ್ಯಮಿಕ ತಾಂತ್ರಿಕತೆಗಳನ್ನಾಗಲಿ ಖಂಡಿಸುವ ವ್ಯಕ್ತಿಯಲ್ಲ. ಮಾನವ ಸಮುದಾಯಕ್ಕೆ ಅನಕೂಲ ಕಲ್ಪಿಸುವ ಯಾವುದನ್ನೂ ಅವರು ನಿಷೇಧಿಸುವುದಿಲ್ಲ. ಅವರ ತಗಾದೆ ಅತಿ ಹೇಯವಾದ ಆಪತ್ತನ್ನು ಸೃಷ್ಟಸುವ ಯಾಷ್ಟಿಂತ್ರಿಕತೆಯ ವಿರುದ್ಧ ಮಾತ್ರ.

ಉದ್ಯೋಗಗಳನ್ನು ಸೃಷ್ಟಿಸುವ ಗೃಹ ಕೈಗಾರಿಕೆಗಳಿಗೆ ಬೇಕಾಗುವ ಯಂತ್ರಗಳನ್ನು ಸಿದ್ಧಗೊಳಿಸುವ ಭಾರಿ ಉದ್ಯಮಗಳನ್ನು ಗಾಂಧೀಜಿ ಎಂದೂ ಬೇಡವೆನ್ನಲಿಲ್ಲ. 'ಹಿಂದ್ ಸ್ವರಾಜ್‌ನಲ್ಲೆ ಇರುವ ಅವರ ಇನ್ನೊಂದು ಪ್ರತಿಪಾದನೆಯನ್ನು ಗಮನಿಸಬಹುದು: 'ಅಮೇರಿ ಕದ ರಾಕ್‌ಫೆಲ್ಲರ್'ಗಿಂತ ಹಿಂದೂಸ್ತಾನದ ರಾಕ್‌ಫೆಲ್ಲರ್ ಉತ್ತಮವಾಗಿರುತ್ತಾನೆಂದು ಭಾವಿಸಿಕೊಳ್ಳುವುದು ಮೂರ್ಖತನವೇ ಆಗುತ್ತದೆ. ಬಡ ಹಿಂದೂಸ್ತಾನ ಸ್ವತಂತ್ರವಾಗಹುದು; ಆದರೆ ಅನೀತಿಯು ಗಳಿಕೆಯಿಂದ ಶ್ರೀಮಂತವಾಗುವ ಹಿಂದೂಸ್ತಾನಕ್ಕೆ ಎಂದಿಗೂ ಮುಕ್ತಿ ದೊರೆಯಲಾರದು.

ಒಟ್ಟಿನಲ್ಲಿ ನಮ್ಮ ಆರ್ಥಿಕತೆಯ ಬಗ್ಗೆ ಉದ್ಭವಿಸುವ ಪ್ರಶ್ನೆ ಇದೊಂದೇ: ಯಾವುದು ನೀತಿಯುತವಾದದ್ದು ಮತ್ತು ಯಾವುದು ಅನೀತಿಯು ಗಳಕೆ ಎನಿಸಿಕೊಳ್ಳುತ್ತದೆ? ಗಾಧೀಜಿಯ ಉತ್ತರ ಬಹಳ ಸರಳವಾದ್ದು: ಯಾವುದು ಸರ್ವರ ಉದುಯಕ್ಕೆ ಹಾದಿ ಮಾಡಿಕೊಡುತ್ತದೋ, ಯಾವುದು ಸಾಮುದಾಯಿಕ ಹಿತವನ್ನುರಕ್ಷಿಸುತ್ತದೋ, ಅದು ನೀತಿಯುತವಾದ್ದು. ಯಾವುದನ್ನು ಸಮುದಾಯದಿಂದ ಕಿತ್ತುಕೊಂಡು ಖಾಸಗಿಯಾಗಿ ಅನುಭೋಗಿಸುತ್ತೇವೋ ಅದು ಅನೀತಿಯು ಗಳಿಕೆ.

ಪುಸಕ್ತ ಆರ್ಥಿಕ ಬೆಳವಣಿಗೆಗಳನ್ನು ತೂಗಿನೋಡಬೇಕಾದ್ದು ಗಾಂಧೀಜಿಯ ಈ ಜನಪರವಾದ ತಕ್ಕಡಿಯಲ್ಲಿ. ಜಾಗತೀಕರಣದ ಭಟ್ಟಂಗಿಗಳು ಗಾಂಧೀಜಿಯವರ ಹೆಸರು ಹೇಳಿ ಅವರ ಚಿಂತನೆ ಮತ್ತು ಕ್ರಿಯೆಗಳಗೆ ಮಸಿ ಬಳಿಯುವುದನ್ನು ಇನ್ನಾದರೂ ನಿಲ್ಲಿಸುವಂತೆ ಮಾಡುವ ಜವಾಬ್ದಾರಿ ಭಾರತದ ನಾಗರಿಕರ ಮೇಲಿದೆ.

***

ಮಾರ್ಟಿನ್, ಮೋಹನದಾಸ್ ಮತ್ತು ಮಂಡೇಲಾರ ವಿಧಿಯ ಪರಿಹಾಸ್ಯ

–ಅರುಂಧತಿರಾಯ್

(ಬಿ.ಬಿ.ಸಿ. ರೇಡಿಯೋದಲ್ಲಿ ಮಾಡಿದ ೧೫ ನಿಮಿಷಗಳ ಭಾಷಣದ ಅನುವಾದ)

ಈಗ್ಗೆ ೪೦ವರ್ಷಗಳ ಹಿಂದೆ ಮಾರ್ಟಿನ್ ಲೂಥರ್‌ಕಿಂಗ್ (ಜೂ) ತಮ್ಮ ವಾಷಿಂಗ್‌ಟನ್ ಯಾತ್ರೆಯ ಸಂದರ್ಭದಲ್ಲಿ ನಾನೊಂದು ಕನಸನ್ನು ಹೊಂದಿದ್ದೇನೆ. ಎಂಬ ತಮ್ಮ ಪ್ರಸಿದ್ಧ ಭಾಷಣವನ್ನು ಮಾಡಿದ್ದರು ಆ ಕನಸಿನ ಗತಿಯೇನಾಯಿತೆಂಬುದನ್ನು ಆಲೋಚಿಸುವ ಕಾಲ ಇದೀಗ ಬಂದಿದೆ. ಮಹಾತ್ಮರುಗಳು ದಿವಂಗತರಾದ ಮೇಲೆ ಅವರನ್ನು ಹೇಗೆ ವ್ಯಾಪಾರಿ ವಸ್ತುಗಳನ್ನಾಗಿ ಮಾಡಲಾಗುತ್ತದೆ ಮತ್ತು ಯಾವ ವೈಷಮ್ಯತೆ, ಇಬ್ಬಂದಿತನ ಮತ್ತು ಅಸಮಾನ್ಯತೆಗಳ ವಿರುದ್ಧ ಅವರು ಹೋರಾಡಿದರೊ ಅವುಗಳನ್ನೇ ಪುನಃ ಹೆಚ್ಚಿಸಲು ಪ್ರಯತ್ನಿಸಲಾಗುತ್ತದೆ ಎಂಬ ವಿಷಯವು ಬಹಳ ಆಸಕ್ತಿದಾಯಕವಾಗಿದೆ. ಪ್ರತಿಯೊಂದು ವಸ್ತುವೂ ಮಾರಾಟಕ್ಕಿರುವ ಈ ಯುಗದಲ್ಲಿ ಮಹಾತ್ಮರುಗಳು ಏಕೆ ಮಾರಾಟಗೊಳ್ಳಬಾರದು? ದೇವರು ಸೃಷ್ಟಿಸಿದ ಈ ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಯೂ ಅಂತರ್‌ರಾಷ್ಟ್ರೀಯ ಹಣಕಾಸು ನಿಧಿಯ ಚೆಕ್ ಪುಸ್ತಕ ಮತ್ತು ಅಮೇರಿಕಾದ ದೂರ ಸಂವೇದಿ ಕ್ಷಿಪಣಿ ಇವುಗಳ ಮಧ್ಯೆ ಸಿಕ್ಕಿಹಾಕಿಕೊಂಡಿರುವಾಗ ಮಹಾತ್ಮರುಗಳು ಹೇಗೆ ತಾನೆ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯ? ಅಂಥವರಲ್ಲಿ ಮಾರ್ಟಿನ್ ಲೂಥರ್‌ಕಿಂಗ್ (ಜೂ), ಮೋಹನ್‌ದಾಸ್ ಗಾಂಧಿ ಮತ್ತು ನೆಲ್ಸನ್‌ಮಂಡೇಲಾ. ಈ ಮೂವರು ಅಹಿಂಸಾ ಪ್ರತಿಭಟನಾ ತಂತ್ರದ ಶ್ರೇಷ್ಠ ಆರಾಧಕರಾಗಿದ್ದರು. ಈ ಮೂವರೂ ೨೦ ನೇ ಶತಮಾನದಲ್ಲಿ ನಡೆದ ವಿವಿಧ ಅಹಿಂಸಾತ್ಮಕ ಸ್ವಾತಂತ್ರ್ಯ ಹೋರಾಟಗಳ ಪ್ರತಿನಿಧಿಯಾಗಿದ್ದಾರೆ. ಯಾವ ಸಮುದಾಯಗಳ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದರೋ ಅದೇ ಸಮುದಾಯಗಳ ಗಣ್ಯರು ಮೋಹನ್‌ದಾಸ್, ಮಂಡೇಲಾ, ಮಾರ್ಟಿನ್‌ರ ಮುಖವಾಡಗಳನ್ನು ಧರಿಸಿ ಹೊಸ ಪೀಳಿಗೆಯವರನ್ನು ಆಕರ್ಷಿಸುತ್ತಿದ್ದಾರೆ.

ಈ ಮೂವರು ಮೂರು ದೇಶಗಳಿಗೆ ಸಂಬಂಧಿಸಿದವರಾಗಿದ್ದಾರೆ. ಅವು ಭಾರತ, ದಕ್ಷಿಣ ಆಫ್ರಿಕಾ, ಅಮೇರಿಕಾ, ಭಗ್ನಗೊಂಡ ಕನಸುಗಳು, ವಿಶ್ವಾಸಘಾತಕತನ, ದುಃಸ್ವಪ್ನಗಳು ಇವುಗಳೆಲ್ಲವನ್ನೂ ಒಟ್ಟು ಸೇರಿಸಿದರೆ ಇಂದಿನ ಸ್ವತಂತ್ರ ವಿಶ್ವದ ಸ್ಥೂಲ ಚಿತ್ರ ಬಿಂಬಿತವಾಗುತ್ತದೆ!

ಭಾರತ

ಕಳೆದ ಮಾರ್ಚ್ ತಿಂಗಳಲ್ಲಿ ಭಾರತದ ಗುಜರಾತಿನಲ್ಲಿ ಅದೂ ಗಾಂಧೀ ಗುಜರಾತಿನಲ್ಲಿ

ಬಲಪಂಥೀಯ ಹಿಂದೂ ಜನಜಂಗುಳಿಯೊಂದು ಎರಡು ಸಾವಿರ ಮುಸ್ಲಿಮರನ್ನು ಮೈನವಿರೇಳಿಸುವಂಥರೀತಿಯಲ್ಲಿ ವ್ಯವಸ್ಥಿತವಾಗಿ ಯಾವ ಅಡ್ಡಿ ಆತಂಕವಿಲ್ಲದೇ ಕೊಲೆಮಾಡಿತು. ಹೆಣ್ಣು ಮಕ್ಕಳ ಸಾಮೂಹಿಕ ಅತ್ಯಾಚಾರ ನಡೆಯಿತು. ಮತ್ತು ಅವರ ಸಜೀವ ದಹನವೂ ಆಯಿತು. ಮುಸ್ಲಿಮರ ಗೋರಿಗಳು ಹಾಗೂ ಪೂಜಾಮಂದಿರಗಳು ನೆಲಸಮ ಮಾಡಲ್ಪಟ್ಟವು. ಒಂದೂವರೆ ಲಕ್ಷಕ್ಕೂ ಹೆಚ್ಚು ಮುಸಲ್ಮಾನರನ್ನು ಅವರ ಮನೆಗಳಿಂದ ಹೊರದಬ್ಬಲಾಯಿತು. ಮುಸ್ಲಿಂ ಜನಾಂಗದ ಆರ್ಥಿಕ ತಳಹದಿಯನ್ನೇ ಹಾಳು ಮಾಡಲಾಯಿತು. ಪ್ರತ್ಯಕ್ಷದರ್ಶಿಗಳ ಪ್ರಕಾರ ಮತ್ತು ಇತರ ಅನೇಕ ತನಿಖೆಗಳ ಪ್ರಕಾರ ರಾಜ್ಯ ಸರ್ಕಾರ ಮತ್ತು ಪೋಲೀಸ್ ಶಾಮಿಲಾಗಿದ್ದವೆಂದು ತಿಳಿದು ಬಂದಿದೆ. ಅತ್ಯಾಚಾರಕ್ಕೆ ಒಳಗಾಗಿದ್ದ ಜನರ ಒಂದು ಸಭೆಯಲ್ಲಿ ನಾನು ಹಾಜರಿದ್ದೆ, "ದಯಮಾಡಿ ನಮ್ಮನ್ನು ಪೋಲೀಸರಿಂದ ರಕ್ಷಿಸಿ! ಇಷ್ಟನ್ನೇ ನಾವು ನಿಮ್ಮನ್ನು ಕೇಳಿಕೊಳ್ಳುತ್ತೇವೆ" ಎಂಬ ಆರ್ತನಾದದೊಂದಿಗೆ ಕೇಳಿ ಬರುತ್ತಿತ್ತು.

೨೦೦೨ ಡಿಸೆಂಬರ್‌ನಲ್ಲಿ ಅದೇ ಸರ್ಕಾರ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಗದ್ದುಗೆಗೆ ಏರಿತು. ಈ ಗಲಭೆಗಳಿಗೆ ಕಾರಣಕರ್ತರೆಂಬ ಆಪಾದನೆಗೆ ಒಳಗಾಗಿದ್ದ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿ ಪದವಿಯಲ್ಲಿ ತಮ್ಮ ಎರಡನೆಯ ಅಧ್ಯಾಯವನ್ನು ಪ್ರಾರಂಭಿಸಿದರು. ಆಗಸ್ಟ್ ೧೫ (ಹದಿನೈದು) ಸ್ವಾತಂತ್ರ್ಯ ದಿನದಂದು ಹರ್ಷೋದ್ಗಾರ ಮಾಡುತ್ತಿದ್ದ ಸಾವಿರಾರು ಜನರ ಸಮ್ಮುಖದಲ್ಲಿ ಮೋದಿ ರಾಷ್ಟ್ರಧ್ವಜವನ್ನು ಹಾರಿಸಿದರು. ಆ ಸಮಯದಲ್ಲಿ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯತ್ವವನ್ನು ಸಂಕೇತಿಸುವ ಕಪ್ಪುಟೋಪಿಯನ್ನು ಧರಿಸಿದ್ದರು. ಆ ಸಂಘಟನೆ ಹಿಟ್ಲರ್‌ನನ್ನೂ ಮತ್ತು ಅವನ ರೀತಿ-ನೀತಿಗಳನ್ನೂ ಮೆಚ್ಚಿಕೊಳ್ಳುವುದರಲ್ಲಿ ಯಾವ ಸಂಕೋಚವನ್ನೂ ತೋರ್ಪಡಿಸಿರಲಿಲ್ಲ. ಹೀಗೆ ತಮ್ಮ ಉತ್ತಮ ರಾಜಕೀಯ ಭವಿಷ್ಯದ ಆತ್ಮವಿಶ್ವಾಸದಿಂದ ತುಂಬಿ ತುಳುಕುತ್ತಿದ್ದ ನರೇಂದ್ರಮೋದಿ ಆ ವರ್ಷದ ಅಕ್ಟೋಬರ್ ೨ ಗಾಂಧೀಜಯಂತಿಯಂದುಮುಖ್ಯ ಅತಿಥಿಯಾಗಿ ಭಾಗವಹಿಸಬೇಕೆಂದು ನೆಲ್ಸನ್‌ಮಂಡೇಲಾರನ್ನು ಆಹ್ವಾನಿಸಿದ್ದರು. ಸುದೈವದಿಂದ ಅವರು ಆ ಆಹ್ವಾನವನ್ನು ಸ್ವೀಕರಿಸಲಿಲ್ಲ.

ದಕ್ಷಿಣ ಆಫ್ರಿಕಾ

ಇನ್ನೂ ಮಂಡೇಲಾರವರ"Small miracle, The Rainbow nation of god"ಎಂದು ಕರೆಯಲ್ಪಡುವ ದಕ್ಷಿಣ ಆಫ್ರಿಕಾದ ಗತಿ ಏನಾಗಿದೆ? ಹೇಗೆ ತಮ್ಮ ದೇಶದಲ್ಲಿಯ ಸಂಪನ್ಮೂಲಗಳು ಖಾಸಗೀಕರಣಕ್ಕೆ ಒಳಗಾದವು ಮತ್ತು ಅವು ಹೇಗೆ ಬಹಳ ದುಬಾರಿ ಬೆಲೆಗೆ ಹರಾಜು ಹಾಕಲ್ಪಟ್ಟವು ಎಂಬುದು ಮಾತ್ರ ನಮಗೆ ತಿಳಿದಿದೆ ಎಂದು ಅಲ್ಲಿಯ ಜನ ಹೇಳುತ್ತಾರೆ. ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ ೧೯೯೪ ರಲ್ಲಿ ಅಧಿಕಾರಕ್ಕೆ ಬಂತು. ನಂತರ ಎರಡು ವರ್ಷಗಳೊಳಗಾಗಿ ಯಾವ ಎಚ್ಚರಿಕೆಯನ್ನೂ ವಹಿಸದೆ ಪ್ರಾರ್ಥನಾ ಸ್ವರೂಪದಲ್ಲಿ ಮಂಡಿಯೂರಿ ಅರ್ಜೆಂಟೈನಾದ ರೀತಿಯಲ್ಲಿ ಉದಾರೀಕರಣದತ್ತ ಧಾವಿಸಿತು. ಅದಕ್ಕಾಗಿ ಬೃಹತ್ ಕಾರ್ಯಕ್ರಮವನ್ನೇ ಹಮ್ಮಿಕೊಂಡಿತು. ಹಾಗೂ

ಹಣಕಾಸಿನ ವ್ಯವಸ್ಥೆಯಲ್ಲಿ ಮಾರ್ಪಾಡು ಕೂಡ ಮಾಡಿಕೊಂಡಿತು. ಎರಡೂವರೆ ಕೋಟಿಯಷ್ಟು ಸಂಖ್ಯೆಯಲ್ಲಿರುವ ಭೂರಹಿತರಿಗೆ ಭೂಮಿಯನ್ನು ಮರುಹಂಚಿಕೊಡುವುದಾಗಿ ಕೊಟ್ಟಿದ್ದ ಸರ್ಕಾರದ ಭರವಸೆ ಇನ್ನೂ ಅಂಧಃಕಾರದ ಕೂಪದಲ್ಲಿಯೆ ಕುಳಿತಿದೆ. ದೇಶದ ಜನಸಂಖ್ಯೆಯ ಶೇ ೬೦ ರಷ್ಟು ಜನರು ಭೂರಹಿತ ರೈತರಿದ್ದಾರೆ. ಆದರೆ ಎಲ್ಲ ವ್ಯವಸಾಯಯೋಗ್ಯ ಜಮೀನು ಅಲ್ಲಿಯ ೬೦.೦೦೦ ಬಿಳಿರೈತರ ಒಡೆತನದಲ್ಲಿದೆ. ಆದ್ದರಿಂದ ಜಾರ್ಜ್‌ಬುಷ್ ಇತ್ತೀಚಿಗಿನ ತಮ್ಮ ದಕ್ಷಿಣಾ ಆಫ್ರಿಕಾದ ಭೇಟಿಯ ಸಮಯದಲ್ಲಿ ಅಧ್ಯಕ್ಷ ಥಾಬೊ ಎಂಬೆಕೆಯನ್ನು ಜಿಂಬಾಬ್ವೆಸಮಸ್ಯೆಯ ತಾವುಗುರಿಯಿಟ್ಟ ವ್ಯಕ್ತಿ ಎಂದು ಹೇಳಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ವರ್ಣ ದ್ವೇಷದ ನಂತರದ ದಕ್ಷಿಣ ಆಫ್ರಿಕಾದಲ್ಲಿ ಅತ್ಯಂತ ಕಡುಬಡತನದಲ್ಲಿರುವ ಶೇ ೪೦ ರಷ್ಟು ಕಪ್ಪು ಆಫ್ರಿಕನ್ ಕುಟುಂಬಗಳ ಆದಾಯವು ಶೇ ೨೦ ರಷ್ಟು ಕಡಿಮೆಯಾಗಿದೆ. ೨೦ ಲಕ್ಷ ಆಫ್ರಿಕನ್ನರು ಅವರವರ ಮನೆಗಳಿಂದ ಉಚ್ಚಾಟಿಸಲ್ಪಟ್ಟಿದ್ದಾರೆ ಪ್ರತಿದಿನ ೬೦೦ಕ್ಕೂ ಹೆಚ್ಚು ಜನ ಏಡ್ಸ್ ಕಾಯಿಲೆಯಿಂದ ಸಾಯುತ್ತಾರೆ. ಜನಸಂಖ್ಯೆಯ ಶೇ ೪೦ರಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ ಮತ್ತು ನಿರುದ್ಯೋಗಿಗಳ ಆ ಸಂಖ್ಯೆ ತೀವ್ರವಾಗಿ ಏರುತ್ತಿದೆ. ಮೂಲ ಸೌಲಭ್ಯಗಳನ್ನು ಖಾಸಗಿ ಕಂಪನಿಗಳಿಗೆ ವಹಿಸಿಕೊಟ್ಟಿದ್ದರಿಂದ ಲಕ್ಷಾಂತರ ಜನರಿಗೆ ನೀರಾಗಲೀ, ವಿದ್ಯುದ್ದೀಪವಾಗಲೀ ದೊರೆಯುತ್ತಿಲ್ಲ. ದರ್ಬಾನ್‌ನ ಚಾಟ್ಸ್‌ವರ್ತ್‌ನಲ್ಲಿರುವ ಥೆರೆಸಾ ನಾಯ್ಡುವಿನ ಮನೆಗೆ ಭೇಟಿ ಕೊಟ್ಟಿದ್ದೆ. ಅವಳ ಗಂಡ ಹಿಂದಿನ ದಿನವಷ್ಟೆ ಏಡ್ಸ್ ನಿಂದ ತೀರಿಕೊಂಡಿದ್ದ. ಅವಳ ಎರಡು ಚಿಕ್ಕ ಮಕ್ಕಳು ಎಚ್ .ಐ.ವಿ ಪಾಸಿಟಿವ್ ರೋಗಿಗಳಾಗಿದ್ದಾರೆ. ಥೆರಾಸಾ ನೀರಿನ ಕಂದಾಯವನ್ನು ಮತ್ತು ಬಾಕಿ ಉಳಿದಿರುವ ಬಾಡಿಗೆಯನ್ನು ಕೊಡಲು ಅಸಮರ್ಥಳಾಗಿದ್ದಾಳೆಂದು ಅವಳ ಮನೆಯ ನೀರಿನ ಪೂರೈಕೆಯನ್ನು ನಿಲ್ಲಿಸಲಾಗಿದೆ. ಅವಳ ತೊಂದರೆಗಳನ್ನು ಮತ್ತು ಅವಳಂತೆಯೇ ಇರುವ ಲಕ್ಷಾವಧಿ ಜನರ ದೂರುಗಳನ್ನೂ ಸರ್ಕಾರವು "ಸಾಲ ತೀರಿಸಲಾಗದ ಸಂಸ್ಕೃತಿವುಳ್ಳ"ವರೆಂದು ಅವರಿಗೆ ಹಣೆಪಟ್ಟಿಕಟ್ಟಿ ದೂರುಗಳನ್ನು ತಳ್ಳಿಹಾಕುತ್ತದೆ. ವರ್ಣವಿರೊಧಿ ಚಳುವಳಿಯಲ್ಲಿ ಖಾಸಗಿ ಕಂಪನಿಗಳು ಮಾಡಿರುವ ನಷ್ಟಕ್ಕೆ ಪರಿಹಾರವನ್ನು ವಸೂಲಿ ಮಾಡುವ ಸರ್ಕಾರದ ಕ್ರಮದ ವಿರುದ್ಧ ತೀರ್ಮಾನಕೊಡುವಂತೆ ಅಮೇರಿಕಾದ ನ್ಯಾಯಾಧೀಶನೊಬ್ಬನನ್ನು ಸರ್ಕಾರವೇ ಅಧಿಕೃತವಾಗಿ ಕೇಳಿತ್ತೆಂಬುದು ಅಂತರರಾಷ್ಟ್ರೀಯ ಹಗರಣದ ಸಂಗತಿಯಾಗಿದೆ. ಈ ವಿಷಯದಲ್ಲಿ ಸರ್ಕಾರದ ವಾದವೇನೆಂದರೆ ಖಾಸಗಿ ಕಂಪನಿಗಳು ಪರಿಹಾರ ಕೊಡುವಂತಾದರೆ ಅದು ಖಾಸಗಿ ಕಂಪನಿಗಳ ವಿದೇಶಿ ಬಂಡವಾಳದ ಹೂಡಿಕೆಗೆ ತಡೆವುಂಟುಮಾಮಾಡುತ್ತದೆ! ಆದ್ದರಿಂದ ದಕ್ಷಿಣ ಆಫ್ರಿಕಾದ ಕಡು ಬಡವರು ಕೂಡ ವರ್ಣದ್ವೇಷ ಮಾಡುವಂಥ ಕಂಪನಿಗಳ ಸಾಲವನ್ನು ತೀರಿಸುವಂತಾಯಿತು. ಈಗಾಗಲೆ ಯಾರು ಕಪ್ಪು ಜನರನ್ನು ಶೋಷಿಸಿ ಹೇರಳವಾಗಿ ಲಾಭವನ್ನು ಗಳಿಸಿದ್ದಾರೋ ಅವರು ನೆಲ್ಸನ್‌ಮಂಡೇಲಾ ನಿರ್ಮಿಸಿರುವ ಸದ್ಭಾವನೆಯಿಂದ ಇನ್ನೂ ಹೆಚ್ಚಿನ ಲಾಭವನ್ನು ಪಡೆಯುವಂತಾಯಿತು.

ಥಾಬೊ ಎಂಬಿಕೆಯನ್ನು ಸರ್ಕಾರದ ಅವನ ಸಹದ್ಯೋಗಿಗಳು ಇನ್ನೂ ಅವನನ್ನು ತಮ್ಮ ಸಹಚರನೆಂದೇ ಕರೆಯುತ್ತಾರೆ. ಹಾರ್ವೆಲ್‌ನ ವಿಡಂಬನ ಬರಹವು ದಕ್ಷಿಣ ಆಫ್ರಿಕಾದಲ್ಲಿ

ನಿಜಜೀವನದ ಸಮಸ್ಯೆಗಳೆಂಬ ಅರ್ಥದಲ್ಲಿ ಕಂಡು ಬರುತ್ತದೆ.

ಅಮೇರಿಕಾ ಸಂಯುಕ್ತ ಸಂಸ್ಥಾನ

ಮಾರ್ಟಿನ್ ಲೂಥರ್‌ಕಿಂಗ್(ಜೂ) ಈಗ ಜೀವಂತವಾಗಿದಿದ್ದರೆ ಮಹಾನ್ ಅಮೇರಿಕನ್ ಜನತೆ ಅವರಿಗಾಗಿ ನಿರ್ಮಿಸಿದ್ದ ವಿವಾದತೀತ ತಮ್ಮ ಸ್ಮಾರಕದಲ್ಲಿ ಸುಮ್ಮನೆ ಕುಳಿತುಕೊಳ್ಳುತ್ತಿದ್ದರೆ ಎಂದು ಸರಳವಾದ ಪ್ರಶ್ನೆಯನ್ನು ಕೇಳಬಹುದು ಅಥವಾ ಅವರು ತಮ್ಮ ಆ ವೇದಿಕೆಯಿಂದ ಕೆಳಗಿಳಿದು ಬಂದು ತಮ್ಮ ಬಗೆಗಿನ ಅಭಿಮಾನಿ ಘೋಷಣೆಗಳನ್ನು ಬದಿಗೊತ್ತಿ ಬೀದಿಗಿಳಿದು ಪುನಃ ತಮ್ಮ ಜನರನ್ನು ಸಂಘಟಿಸುತ್ತಿದ್ದರೆ?

೧೯೬೭ ಏಪ್ರಿಲ್ ೪ ರಂದು ಅಂದರೆ ಅವರ ಹತ್ಯೆಯ ಒಂದು ವರ್ಷದ ಮೊದಲು ನ್ಯೂಯಾರ್ಕ್ ನಗರದಲ್ಲಿ ರಿವರ್ ಸೈಡ್ ಚರ್ಚ್‌ನಲ್ಲಿ ಕಿಂಗ್ ಹೀಗೆ ಹೇಳಿದರು. "ಕೊಚ್ಚೆ ಪ್ರದೇಶದಲ್ಲಿರುವ ಜನರಿಗಾಗುತ್ತಿರುವ ಹಿಂಸೆಯ ವಿರೋಧವಾಗಿ ಮಾತನಾಡುವ ಮೊದಲು ಹಿಂಸೆಯ ಅತ್ಯಂತ ದೊಡ್ಡ ಪೋಷಕನಾಗಿರುವ ತಮ್ಮ ಸರ್ಕಾರದ ವಿರುದ್ಧ ಮೊದಲು ಮಾತಾಡಬೇಕಾಗುತ್ತದೆ." ೧೯೬೭ ರಿಂದ ೨೦೦೩ ನೇ ಇಸವಿಯವರೆಗಿನ ಈ ೩೬ ವರ್ಷಗಳಲ್ಲಿ ಮಾರ್ಟಿನ್ ಲೂಥರ್‌ಕಿಂಗ್ ರವರ ಆ ಅಭಿಪ್ರಾಯವನ್ನು ಬದಲಾಯಿಸಬಹುದಾದಂಥ ಯಾವು ದಾದರೂ ಒಳ್ಳೆಯ ಘಟನೆಗಳು ನಡೆದಿವೆಯೆ? ತನ್ನ ದೇಶದ ರಿಪಬ್ಲಿಕನ್ ಪಕ್ಷದ ಸರ್ಕಾರವೇ ಆಗಿರಲಿ ಅಥವಾ ಡೆಮೊಕ್ರೆಟ್ ಪಕ್ಷದ ಸರ್ಕಾರವೇ ಆಗಿರಲಿ ಅದು ಗೌಪ್ಯವಾಗಿಯೋ, ಬಹಿರಂಗವಾಗಿಯೋ ನಡೆಸಿರುವ ಜನಸಮುದಾಯದ ಹತ್ಯೆಯನ್ನು ನೋಡಿ ತಾನು ಮೊದಲು ಹೊಂದಿದ್ದ ಅಭಿಪ್ರಾಯವನ್ನೇ ದ್ವಿಗುಣವಾಗಿ ದೃಡಪಡಿಸಿಕೊಳ್ಳುವರೆ?

ಮಾರ್ಟಿನ್ ಲೂಥರ್‌ಕಿಂಗ್ (ಜೂ) ಓರ್ವ ಬಂಡಾಯಗಾರನಾಗಿ ತಮ್ಮ ಜೀವನವನ್ನು ಪ್ರಾರಂಭಿಸಿರಲಿಲ್ಲವೆಂದು ನಾವು ಮರೆಯದಿರೋಣ. ಅವರು ಓರ್ವ ಶಾಂತಿ ಸಂಧಾನಕಾರನಾಗಿ ದೇವರಲ್ಲಿ ನಂಬಿಕೆಉಳ್ಳವನಾಗಿ ತಮ್ಮ ಜೀವನವನ್ನು ಪ್ರಾರಂಭಿಸಿದರು. ೧೯೬೪ ರಲ್ಲಿ ಅವರು ನೊಬೆಲ್ ಬಹುಮಾನವನ್ನು ಪಡೆದರು. ಪತ್ರಿಕಾ ಮಾಧ್ಯಮಗಳು ಅವರನ್ನು ಅಸಾಧಾರಣವಾದ ಕಪ್ಪು ನಾಯಕ ಎಂದು ಬಣ್ಣಿಸಿದವು. ಇದಾದ ಮೂರು ವರ್ಷಗಳ ನಂತರ ಮಾರ್ಟಿನ್ ಲೂಥರ್‌ಕಿಂಗ್ (ಜೂ) ವಿಯೆಟ್ನಾಂನಲ್ಲಿ ನಡೆಸಿತ್ತಿರುವ ತಮ್ಮ ಸರ್ಕಾರದ ಜನಾಂಗೀಯ ಯುದ್ಧಕ್ಕೂ ಸ್ವದೇಶದಲ್ಲಿ ಅದು ಆಚರಿಸುತ್ತಿರುವ ಜನಾಂಗೀಯ ನೀತಿಗೂ ಸಂಬಂಧವಿದೆಯೆಂದು ಸಾರ್ವಜನಿಕವಾಗಿ ಎತ್ತಿ ತೋರಿಸಿದರು.

ವಿಯೆಟ್ನಾಂನಲ್ಲಿ ಕಪ್ಪುವರ್ಣದ ಅಮೇರಿಕನ್ನರು ಯುದ್ಧ ವಿರೋಧಿ ಭಾವನೆಗಳನ್ನು ಹೊಂದಿರುವುದರ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಆಶ್ಚರ್ಯಕರವಾದ ತರ್ಕವನ್ನು ಮುಂದಿಟ್ಟಿತು. ಆ ಪತ್ರಿಕೆಯ ಪ್ರಕಾರ ತನ್ನ ದೇಶದ ಹಿತಕ್ಕಾಗಿ ಹೋರಾಟ ಮಾಡುವ ಅವಕಾಶವನ್ನು ನೀಗ್ರೋನಿಗೆ ಕೊಡಲಾಗಿದೆ! ಈ ತರ್ಕವನ್ನು ಟೈಮ್ಸ್ ಪತ್ರಿಕೆ ಮಂಡಿಸುವಾಗ ಮಾರ್ಟಿನ್

ಲೂಥರ್‌ಕಿಂಗ್(ಜೂ) ರವರ ಕೆಲವಿಚಾರಗಳನ್ನು ಹೇಳುವುದನ್ನು ಕೈಬಿಟ್ಟಿತು. ಮುಖ್ಯವಾಗಿ ಕಿಂಗ್ ರವರ ಪ್ರಕಾರ ವಿಯೆಟ್ನಾಂನ ಹೋರಾಟದಲ್ಲಿ ಬಿಳಿಯರೆಷ್ಟಿದ್ದಾರೋ ಅದಕ್ಕೆ ಎರಡರಷ್ಟರ ಸಂಖ್ಯೆಯಲ್ಲಿ ಕಪ್ಪು ಅಮೇರಿಕನ್ನರು ಸಾಯುತ್ತಿದ್ದಾರೆ. ಹೆಣಗಳು ತುಂಬಿದ ಮೂಟೆಗಳು ಸ್ವದೇಶಕ್ಕೆ ಬಂದಾಗ ಕಪ್ಪು ಸೈನಿಕರ ದೇಹಗಳು ವರ್ಣಾಧಾರಿತವಾಗಿ ವಿಂಗಡಣೆಗೊಂಡು ಪ್ರತ್ಯೇಕ ಸ್ಮಶಾನದಲ್ಲಿ ಹೂಳಲ್ಪಡುತ್ತಿದ್ದವೆಂಬ ಸಂಗತಿಯನ್ನು ನ್ಯೂಯಾರ್ಕ್ ಟೈಮ್ಸ್ ಪ್ರಕಟಿಸುವುದನ್ನು ಕೈ ಬಿಟ್ಟಿತು.

ಅಮೇರಿಕಾ ಸರ್ಕಾರದ ಅಂಕಿ-ಸಂಖ್ಯೆಗಳ ಪ್ರಕಾರ ಅಮೇರಿಕಾ ದೇಶದ ಜನಸಂಖ್ಯೆಯ ಶೇ ೧೨ರಷ್ಟಿರುವ ಆಫ್ರಿಕನ್ ಮೂಲದ ಅಮೇರಿಕನ್ನರೆ ಆ ದೇಶದ ಒಟ್ಟು ಸೈನ್ಯದ ಶೇ ೨೯ ರಷ್ಟಿದ್ದಾರೆ. ಈ ವಸ್ತುಸ್ಥಿತಿಯನ್ನು ಕುರಿತು ಮಾರ್ಟಿನ್ ಲೂಥರ್‌ಕಿಂಗ್ ಈಗ ಏನು ಹೇಳಬಹುದು? ಬಹುಶಃ ಅವರು ಸಕಾರಾತ್ಮಕ ದೃಷ್ಟಿಕೋನವನ್ನು ಹೊಂದುತ್ತಾ ಇದೊಂದು ಅತ್ಯಂತ ಪರಿಣಾಮಕಾರಿ ಕ್ರಮವೆಂದು ತಿಳಿಯುತ್ತಿದ್ದರೆ?

ಕಿಂಗ್ ಅವರು ಮತದಾನದ ಹಕ್ಕಿಗಾಗಿ ಬಹಳ ಕಠಿಣತಮ ಹೋರಾಟವನ್ನು ನಡೆಸಿ ಜಯಶೀಲರಾಗಿದ್ದರು ಆದರೆ ಈಗ ಆಫ್ರಿಕನ್ ಮೂಲದ ೧೪ ಲಕ್ಷ ಅಮೇರಿಕನ್ನರು ಅಂದರೆ ಮತಚಲಾಯಿಸುವ ಹಕ್ಕಿರುವ ಕಪ್ಪು ಜನರ ಜನಸಂಖ್ಯೆಯ ಶೇ ೧೩ರಷ್ಟು ಜನರು ತಮ್ಮ ಮತ ಚಲಾವಣೆಯ ಹಕ್ಕನ್ನು ವಿವಿಧ ಘೋರ ಅಪರಾಧಗಳ ಶಿಕ್ಷೆಯ ಕಾರಣದಿಂದ ಕಳೆದುಕೊಂಡಿದ್ದಾರೆ. ಈ ಸಮಸ್ಯೆಯನ್ನು ಕುರಿತು ಕಿಂಗ್ ಏನು ಹೇಳಬಹುದು? ಆದರೆ ಇದೆಲ್ಲಕ್ಕಿಂತಲೂ ಹೆಚ್ಚು ಪ್ರಾಸಂಗಿಕ ಪ್ರಶ್ನೆ ಏನೆಂದರೆ ಅಮೇರಿಕೆಯ ಸೈನ್ಯಶಕ್ತಿಯ ೧/೫ ರಷ್ಟಿರುವ ಕಪ್ಪು ಪುರುಷ ಮತ್ತು ಮಹಿಳೆಯನ್ನು ಕುರಿತು ಏನು ಹೇಳುತ್ತಾರೆ.

ವಿಯೆಟ್ನಾಂನಲ್ಲಿ ಹೊರಾಡುತ್ತಿರುವ ಕಪ್ಪು ಸೈನಿಕರಿಗೆ ಕಿಂಗ್ ಈ ರೀತಿ ಹೇಳಿದರು: ವಿಯೆಟ್ನಾಂನಲ್ಲಿ ಅಮೇರಿಕಾದ ಪಾತ್ರವೇನು ಎಂಬುದನ್ನು ಸೈನಿಕರು ಅರ್ಥಮಾಡಿಕೊಳ್ಳಬೇಕು ಮತ್ತು ಆತ್ಮಸಾಕ್ಷಿಗನುಗುಣವಾಗಿ ಕೆಲಸ ಮಾಡುವ ಪರ್ಯಾಯವನ್ನು ಕುರಿತು ಆಲೋಚಿಸಬೇಕು

೧೯೬೭ರ ಏಪ್ರಿಲ್ ತಿಂಗಳಲ್ಲಿ ಮ್ಯಾನ್‌ಹಟನ್‌ನಲ್ಲಿ ನಡೆದ ಬೃಹತ್ ಯುದ್ಧ ವಿರೋಧಿ ಪ್ರತಿಭಟನೆಯಲ್ಲಿ ಸ್ಟೊಕ್ಕೆಲಿ ಆರ್ಮಿಚಲ್ ವಿಯೆಟ್ನಾಂ ಯುದ್ಧವನ್ನು ಈ ರೀತಿ ವರ್ಣಿಸಿದರು. ಅಲ್ಲಿಯ "ಹಳದಿವರ್ಣದ ಜನರ ವಿರುದ್ಧ ಯುದ್ಧ ಮಾಡಲು ಕಪ್ಪು ಜನರನ್ನು ಕಳುಹಿಸುವುದೇ ಬಿಳಿ ಜನರ ನೀತಿ ಆಗಿದೆ."

ಅಂದಿನಿಂದ ಈವರೆಗೆ ಏನಾದರೂ ಬದಲಾವಣೆಯಾಗಿದೆಯೆ? ಈಗಾಗಿರುವ ಬದಲಾವಣೆ ಏನೆಂದರೆ ಕಡ್ಡಾಯವಾಗಿ ಸೈನ್ಯಕ್ಕೆ ಸೇರುವ ಬದಲು ಬಡತನದಿಂದಾಗಿ ಸೈನ್ಯ ಸೇರುವಂತಾಗಿದೆ ಅಷ್ಟೆ. ಒಟ್ಟಿನಲ್ಲಿ ಸೈನ್ಯ ಸೇರುವುದಕ್ಕೆ ಬೇರೆ ಬೇರೆ ರೀತಿಯ ಒತ್ತಾಯ ಉಂಟಾಗಿದೆ. ಇರಾಕ್ ಮೇಲಿನ ದಾಳಿ ಮತ್ತು ಅದರ ಆಕ್ರಮಣ ಇವು ಅಮೇರಿಕಾ ಸರ್ಕಾರದ ವಿಯೆಟ್ನಾಂ ಮೇಲಿನ ದಾಳಿಯ ಹಿಂದಿರುವ ನೈತಿಕತೆಗಿಂತ ಭಿನ್ನವಾಗಿದೆಯೆಂದೇನಾದರೂ ಮಾರ್ಟಿನ್ ಲೂಥರ್‌ಕಿಂಗ್ (ಜೂ) ಹೇಳುವರೆ? ಈ ಯುದ್ಧಗಳಲ್ಲಿ ಭಾಗವಹಿಸುವುದು ನೈತಿಕವೂ ಮತ್ತು

ನ್ಯಾಯಯುತವೂ ಆಗಿತ್ತೆಂದು ಹೇಳುವರೆ? ಸದ್ದಾಂಹುಸೇನ್‌ನಂಥ ಸರ್ವಾಧಿಕಾರಿಗೆ ಬೆಂಬಲ ನೀಡಿದ್ದು ಸರಿಯಿತ್ತೆಂದು ಹೇಳುವರೆ?

ವಿಯೆಟ್ನಾಂ ಯುದ್ಧದ ವಿರುದ್ಧ ಮಾರ್ಟಿನ್ ಲೂಥರ್‌ಕಿಂಗ್(ಜೂ) ಮಾತನಾಡಿದಾಗಲೆಲ್ಲ ಕೆಲವು ಸಂಬಂಧಗಳ ಬಗ್ಗೆ ಬಹಿರಂಗವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಂಥ ಕೆಲ ಸಂಬಂಧಗಳ ಬಗ್ಗೆ ಈಗ ಮಾತನಾಡುವುದಕ್ಕೆ ಅನೇಕರು ನಾಚಿಕೊಳ್ಳುತ್ತಾರೆ. ಅವರು ಆ ಸಂಬಂಧಗಳು ಜನಾಂಗೀಯ ದ್ವೇಷಭಾವನೆಯುಳ್ಳವೂ, ಆರ್ಥಿಕವಾಗಿ ಶೋಷಿಸುವಂಥವೂ ಮತ್ತು ಯುದ್ಧವೂ ಆಗಿವೆಯೆಂದು ವರ್ಣಿಸಿದರು. ಬಡದೇಶಗಳಿಗೆ ಅಮೇರಿಕಾ ತನ್ನ ದುಷ್ಟತನಗಳನ್ನು, ತನ್ನ ಜನಾಂಗಭೇದ ನೀತಿಯನ್ನು ಆರ್ಥಿಕ ಪುಂಡತನವನ್ನು ಮತ್ತು ಯುದ್ಧ ಸಾಮಾಗ್ರಿಗಳನ್ನು ರಫ್ತು ಮಾಡುವುದು ಅಮೇರಿಕಾದ ಹಕ್ಕು ಎಂದು ಜನರಿಗೆ ಕಿಂಗ್ ತಿಳಿಸುವರೆ?

ಅಮೇರಿಕಾದ ಆಧುನಿಕ ಜೀವನದಲ್ಲಿ ನ್ಯಾಯವಾದ ಪಾಲು ಪಡೆಯಲು ಕಪ್ಪು ಅಮೇರಿಕನ್ನರು ಹೋರಾಟ ಮಾಡಬೇಕೆಂದು ಅವರು ಹೇಳುವರೆ? ಇದಕ್ಕಾಗಿ ಲ್ಯಾಟಿನ್ ಅಮೇರಿಕಾ, ಮಧ್ಯಪ್ರಾಚ್ಯ, ಏಷ್ಯಾ ಆಫ್ರಿಕಾ ಈ ಎಲ್ಲ ಪ್ರದೇಶಗಳಲ್ಲಿಯ ಜನರು ಭಯಾನಕವಾದ ಬೆಲೆ ತೆರಬೇಕಾಗುತ್ತದೆಂದು ಅವರು ಹೇಳುತ್ತಾರೆಯೆ? ತಮ್ಮ ಕನಸಿನೊಂದಿಗೆ ದೊಡ್ಡ ಅಮೇರಿಕೆಯ ಕನಸನ್ನು ಕಸಿ ಮಾಡುವುದನ್ನು ಅವರು ಬೆಂಬಲಿಸುವರೆ?

ನಾಗರಿಕ ಹಕ್ಕುಗಳಿಗಾಗಿ ಕಪ್ಪು ಅಮೇರಿಕನ್ನರು ನಡೆಸಿದ ಹೋರಾಟದಿಂದಾಗಿ ನಮ್ಮ ಯುಗದ ಅತ್ಯಂತ ಶ್ರೇಷ್ಟ ರಾಜಕೀಯ ಹೋರಾಟಗಾರರನ್ನು, ಚಿಂತಕರನ್ನು, ಸಾರ್ವಜನಿಕ ಭಾಷಣಕಾರರನ್ನು ಮತ್ತು ಲೇಖಕರನ್ನು ಪಡೆದವು. ಉದಾಹರಣೆಗೆ ಮಾರ್ಟಿನ್ ಲೂಥರ್ ಕಿಂಗ್ (ಜೂ), ಮಾಲ್ಕಮ್ ಎಕ್ಸ್, ಪ್ಯಾನಿಲೋವ್, ಹ್ಯಾಮರ್, ಎಲ್ಲಾಬೇಕರ್, ಜೇಮ್ಸ್ ಬಾಲ್ಡ್‌ವಿನ್ ಇವರಲ್ಲದೆ ದಂತಕಥೆಯಾದಂಥ ಮಹಮದ್ ಅಲಿಯನ್ನೂ ಕೂಡ ಪಡೆದವು.

ಇವರೆಲ್ಲರ ಸಂದೇಶದ ಉತ್ತರಾಧಿಕಾರಿ ಯಾರು? ಕೊಲಿನ್ ಪಾವೆಲ್‌ರೆ? ಕಾಂಡೋಲಿಸ್ ರೈಸ್‌ರೆ? ಮೈಕೆಲ್ ಪಾವೆಲ್‌ರೆ? ಇವರೆಲ್ಲರೂ ಮೇಲೆ ಬಣ್ಣಿಸಲಾದ ಮಾದರಿ ವ್ಯಕ್ತಿಗಳಿಗೆ ತೀರ ವಿರೋಧವಾದಂತವರು. ಕಪ್ಪು ಜನರ ಭೌತಿಕ ಯಶಸ್ಸಿನ ಕನಸುಗಳ ಸಾಕಾರ ರೂಪವೇನೋ ಎಂಬಂತಿದ್ದರೂ ವಾಸ್ತವವಾಗಿ ಮಹಾನ್ ವಿಶ್ವಾಸಘಾತಕರಾಗಿದ್ದಾರೆ. ಅಲಂಕೃತ ನೃತ್ಯಗೃಹದ ದ್ವಾರಪಾಲಕರಂತಿದ್ದು ಮತ್ತು ಹಿಂದುಳಿದ ಜನಾಂಗದ ಕ್ಷೋಭೆ ಮತ್ತು ಹೋರಾಟಗಳ ಪ್ರವೇಶವಾಗದಂತೆ ಕಾಯುತ್ತಿದ್ದಾರೆ. ಕಪ್ಪು ಅಮೇರಿಕಾ ತನ್ನ ನಿಜವಾದ ನಾಯಕರಿಗೆ ಪ್ರಾಮಾಣಿಕವಾದ ಕೃತಜ್ಞತೆಯನ್ನು ಸಲ್ಲಿಸಬೇಕೆಂದಿದ್ದರೆ ಪುನಃ ವಾಷಿಂಗ್ಟನ್ ಯಾತ್ರೆಯನ್ನು ಮಾಡುವ ಸಮಯ ಬಂದಿದೆ. ಭರವಸೆಯನ್ನು ಜೀವಂತವಾಗಿಡಬೇಕಾಗಿದೆ–ಈ ಭರವಸೆ ನಮ್ಮೆಲ್ಲರಿಗಾಗಿ.

ಅನು : ಸು.ಕೌ.

* * *

ಜನಪದ ನಿಲಯುದ ಅಂತರಂಗದಲ್ಲಿ-೧೧



"ಚಿತ್ರಕ್ಕೆ ಹೊಸ ಗುಂಗು
ಹಾಡಿಗೂ ಹೊಸರಂಗು
ಗಳಿಗೆ ಗಳಿಗೆಗೂ ಹೊಸ ಹೊಸ ರೀತಿಗೆ
ಈ ಜಗವೊಡುತ್ತಿದೆ-
ಪ್ರಗತಿಯ ಹಂತಕೊ
ಪ್ರಲಯ ದುರಂತಕೊ
ಹಳತ ನೋಡಿ ತಾ ಕಿಲ ಕಿಲ ನಗುತಲಿ
ಓ ಜಗವೊಡುತಿದೆ -"

-ಪು.ತಿ.ನ

ಮೇಲುಕೋಟೆಗೆ ಬಂದು ಭಕ್ತ ಮಂಡಳಿಯ ಕಿರುಕೋಣೆಯನ್ನು ಸೇರಿದಾಗ ನನ್ನ ಹಿಂದೆ ಲೋಕನಾಯಕನೊಂದಿಗೆ ಕೆಲಸ ಮಾಡಿದ ಐದು ವರ್ಷಗಳ ವರ್ಣರಂಜಿತ ಅನುಭವವಿತ್ತು. ಮುಂದೆ ಪ್ರಾಚೀನ ಕಾಲದ ಪುಟ್ಟ ಗ್ರಾಮ ಜೀವನವಿತ್ತು. ವಿಶಾಲ ಭಾರತದ ಕ್ಷೇತ್ರದಿಂದ ಚಿಕ್ಕಹಳ್ಳಿಗೆ ಇಳಿದುದಾಗಿತ್ತು. ಭೂದಾನ-ಸಮಾಜವಾದ ಜೀವನವಾದ ಸರ್ವೋದಯ ಇತ್ಯಾದಿ ಮೇರು ವಿಚಾರಗಳ ಕ್ಷೇತ್ರದಿಂದ ಯಾವ ವೈಚಾರಿಕ ನೆಲೆಯೂ ಇಲ್ಲದ ಸಮಾಜ ಜೀವನವಾಹಿನಿಯಲ್ಲಿ ಬಂದಿಳಿದಿದ್ದೆ.ಹೀಗಾಗಿ ಮನಸ್ಸು ಶೂನ್ಯವಾಗಿತ್ತು. ಮುಂದಿನ ದಾರಿ ಅಸ್ಪಷ್ಟವಾಗಿತ್ತು. ಸುಮ್ಮನೆ ಕಾಲಕಳೆಯುವುದನ್ನು ಬಿಟ್ಟರೆ ಇನ್ನಾವ ದಾರಿ ಇಲ್ಲದಾಗಿತ್ತು.ಯುವಕನೊಬ್ಬ ನಿರಿದ್ಯೋಗಿಯಾಗಿ ಊರಲ್ಲಿ ಓಡಾಡುತ್ತಿದ್ದರೆ ಜನರಲ್ಲಿ ಯಾವ ಗೌರವ ಭಾವನೆ ತಾನೆ ಮೂಡಲು ಸಾಧ್ಯ? ಆಗ ಎಲ್ಲರ ದೃಷ್ಟಿಯಲ್ಲಿ ಒಂದು ಕುತೂಹಲ, ಒಂದು ಪ್ರಶ್ನಾರ್ಥಕ ವಿಚಾರ ಮಾತ್ರ ಇರಲು ಸಾಧ್ಯ. ಅದೇ ರೀತಿ ಎಲ್ಲರೂ ಅಪರಿಚಿತರಾಗಿಯೇ ಇರುವಾಗ ಗ್ರಾಮ ಜೀವನದ ಯಾವೊಂದು ಚಟುವಟಿಕೆಯಲ್ಲೂ ನೇರವಾಗಿ ಭಾಗವಹಿಸಲು ಸಾಧ್ಯವಿಲ್ಲದೇ ಇರುವಾಗ ಹರಿಯುವ ಹೊಳೆಯ ದಂಡೆಯ ಮೇಲೆ ನಿಂತ ವ್ಯಕ್ತಿಯಾಗಿದ್ದೆ. ಹೊಳೆಯಲ್ಲಿ ಈಜಲೂ ಆರೆ, ನಡೆದು ದಾಟಲೂ ಆರೆ ಎನ್ನುವಂಥ ಸ್ಥಿತಿ ನನ್ನದಾಗಿತ್ತು. ಅಪರಿಚಿತತೆಯ, ಅನಿಶ್ಚಿತತೆಯ, ನಿಷ್ಕ್ರಿಯತೆಯ ಹಿಮವನ್ನು ಕರಗಿಸಬೇಕಿತ್ತು. ಆದರೆ ಹೇಗೆ ಎಂಬುದು ಮಾತ್ರ ತಿಳಿಯದು. ಸರ್ಕಾರಿ ನೌಕರನಿಗೂ, ಓರ್ವ ಸಾಮಾಜಿಕ ಕಾರ್ಯಕರ್ತನಿಗೂ ಇರುವ ದೊಡ್ಡ ವ್ಯತ್ಯಾಸ ಇದು. ಸರ್ಕಾರಿ ನೌಕರನಿಗೆ ಗೊತ್ತಾದ ಒಂದು ಕೆಲಸವಿರುತ್ತದೆ. ಅವನ ಸೇವೆಗೆ ಒಳಪಡುವ ನಿರ್ದೇಶಿತ ಸಮೂಹವಿರುತ್ತದೆ, ಅವನ ಜೀವನಕ್ಕೆ ಭದ್ರತೆ ಇರುತ್ತದೆ.

ಅಲ್ಲದೆ ಅವನ ಮಾತಿಗೆ ತಕ್ಕಮಟ್ಟಿಗಾದರೂ ಮನ್ನಣೆಯಿರುತ್ತದೆ. ಅವನ ಕೆಲಸಕ್ಕೆ ಜನರ ಸಹಕಾರಕ್ಕಿಂತ ಸರ್ಕಾರದ ಒತ್ತಾಸೆ ಪ್ರೇರಕವಾಗಿರುತ್ತದೆ. ಇದೆಲ್ಲಕ್ಕೆ ಭಿನ್ನವಾಗಿರುತ್ತದೆ ಸಮಾಜ ಸೇವಕನ ಸ್ಥಿತಿ.

ಸಮಾಜ ಸೇವಕ ಎಲ್ಲರೂ ತುಳಿದ ದಾರಿಯಲ್ಲಿ ನಡೆಯಲು ಸಾಧ್ಯವಾಗುವುದಿಲ್ಲ. ಅವನು ತನ್ನದೇ ದಾರಿ ಮತ್ತು ತನ್ನದೇ ಪ್ರಯತ್ನಗಳನ್ನು ತನ್ನದೇ ಸಾಧನಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲ ಆದರ್ಶ, ಸಿದ್ಧಾಂತ, ತ್ಯಾಗ ಮೂಲದ್ರವ್ಯಗಳಾಗಿರುತ್ತವೆ. ಪ್ರತಿಫಲದ ಆಸೆ ಶೂನ್ಯವಾಗಿರುತ್ತದೆ. ಸಂಗ್ರಹಾಸಕ್ತಿ ಅವನ ಜೀವನದ ಮೂಲಶತ್ರು ಇಂಥ ಗುಣಧರ್ಮಗಳುಳ್ಳ ಸಮಾಜ ಸೇವಕನಿಗೆ ಅವನ ಸಹಜೀವನದ ಸಮಾಜವೇ ಅವನಿಗೆ ವಿರೋಧವಾಗಿರುವಂತೆ ಅನುಭವವಾಗುತ್ತದೆ. ಅವನ ವಿಚಾರಕ್ಕೆ ವಿರೋಧವಾಗಿ ಸಮಾಜ ಜೀವನದ ಪ್ರವಾಹ ಹರಿಯುತ್ತಿರುವಂತೆಯೂ, ಸಮಾಜ ಸೇವಕನ ಜೀವನ ಸಮಾಜ ಜೀವನಕ್ಕೆ ವಿರೋಧವಾಗಿ ಹರಿಯುತ್ತಿರುವಂತೆಯೂ ಅನುಭವವಾಗುತ್ತದೆ. ಆ ಜೀವನ ಪ್ರವಾಹಗಳ ಸಂಗಮವಾಗುವುದಿಲ್ಲವೇನೋ ಎಂಬಷ್ಟರ ಮಟ್ಟಿಗೆ ವಿರುದ್ಧ ದಿಕ್ಕುಗಳಲ್ಲಿ ಹರಿಯುತ್ತಿರುತ್ತದೆ.


ಇಂಥ ವಸ್ತು ಸ್ಥಿತಿಯ ಹಿನ್ನೆಲೆಯಲ್ಲಿ ಕೆಲಸವನ್ನು ಹೇಗೆ ಪ್ರಾರಂಭಿಸಬೇಕೆಂದು ತಿಳಿಯದೆ ತಡವರಿಸುತ್ತಿದ್ದೆ.

ಆಗ ನನ್ನ ನೆರವಿಗೆ ಬಂದುದು ೧೯೪೨ನೇ ಇಸ್ವಿಯ ಸೇವಾದಲದ ನನ್ನ ಅನುಭವ. ಆಗ ಸ್ವಾತಂತ್ರ್ಯಚಳುವಳಿ ತನ್ನ ಉಚ್ಛ್ರಾಯಸ್ಥಿತಿ ಮುಟ್ಟಿತು. ಮಾಡು ಇಲ್ಲವೆ ಮಡಿ ಎಂಬ ಘೋಷಣೆ ಎಲ್ಲೆಲ್ಲೂ ಪ್ರತಿಧ್ವನಿಸುತ್ತಿತ್ತು. ಚಿಕ್ಕ ಮಕ್ಕಳನ್ನಾದಿಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸುವ ಕಾರ್ಯಕ್ರಮವಾಗಿ ಸೇವಾದಲ ದೇಶದ ತುಂಬೆಲ್ಲ ಹೊರ ಹೊಮ್ಮಿತ್ತು. ಪ್ರತಿಯೊಂದು ಸೇವಾದಲಕ್ಕೂ ಒಬ್ಬೊಬ್ಬ ದೇಶನಾಯಕನ ಹೆಸರಿರುತ್ತಿತ್ತು. ರಾಷ್ಟ್ರಬಾವುಟದೊಂದಿಗೆ ನಾಯಕರಿಗೆ ಜಯಕಾರ ಹೇಳುತ್ತ ಗ್ರಾಮ ಪ್ರದಕ್ಷಿಣೆ ಮಾಡುವುದು, ನಾಯಕರ ಸಭೆಗಳನ್ನು ಏರ್ಪಡಿಸುವುದು, ರಾಷ್ಟ್ರೀಯ ಸಮಾವೇಶಗಳಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುವುದು, ಇತ್ಯಾದಿಗಳು ಸೇವಾದಲದ ಘಟಕಗಳ ಕೆಲಸಗಳಾಗಿದ್ದವು. ಶಿಸ್ತು, ಸಮಯಪಾಲನೆ, ಗಾಂಧೀಟೋಪಿ ಇವೆಲ್ಲವೂ ಸೇವಾದಲ ಸೈನಿಕರ ಗುರುತುಗಳಾಗಿದ್ದವು. ಜವಾಹರಲಾಲ್‌ನೆಹರು, ಡಾ॥ ಎನ್.ಎಸ್. ಹರ್ಡಿಕರ್ ಮುಂತಾದವರು ಸೇವಾದಲದ ಮುಂಚೂಣಿ ನಾಯಕರಾಗಿದ್ದರು. ೧೯೪೨ ರಲ್ಲಿ ನಾನು ಬೆಳಗಾವಿಯಲ್ಲಿ ಕನ್ನಡ ಪ್ರಾಥಮಿಕ ಶಾಲೆಯ ಒಬ್ಬ ವಿದ್ಯಾರ್ಥಿ, ಅಲ್ಲಿಯೇ ಶಾಲೆಯ ಮೈದಾನದಲ್ಲಿ ನಡೆಯುತ್ತಿದ್ದ ಸೇವಾದಲಕ್ಕೆ ತಪ್ಪದೇ ಹೋಗುತ್ತಿದ್ದೆ. ಸೇವಾದಲದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಸೇವಾದಲ ಹೇಗೆ ಬಾಲಕರ ಮನಸ್ಸನ್ನು ಸೂರೆಗೊಂಡು ಯಾವುದೇ ಒಂದು ಕೆಲಸಕ್ಕೆ ಹೇಗೆ ಸಿದ್ಧಮಾಡುತ್ತಿದ್ದವೆಂಬುದು

ನನಗೆ ಸಹಜವಾಗಿಯೇ ನೆನಪಿಗೆ ಬಂತು. ಸೇವಾದಲವನ್ನು ಪ್ರಾರಂಭಿಸುವ ಮೂಲಕ ಗ್ರಾಮದ ಮಕ್ಕಳನ್ನು, ಯುವಕರನ್ನು ಸಂಘಟಿಸಬಹುದೆಂದು ಅನಿಸಿತು. ಆದ್ದರಿಂದ ಒಂದು ದಿನ ಸಂಜೆ ಸೇವಾದಲವನ್ನು ಪ್ರಾರಂಭಿಸಿದೆ, ಸೇವಾದಲದ ಬಾವುಟ ರಾಷ್ಟ್ರಧ್ವಜವೇ. ಆದರೆ ಅದರ ಹೆಸರು ಮಾತ್ರ ಗ್ರಾಮ ಸೇವಾದಲ. ಪ್ರತಿದಿನ ಸಾಯಂಕಾಲ ಸುಮಾರು ಒಂದು–ಒಂದೂವರೆ ಘಂಟೆ ಈ ಕಾರ್ಯಕ್ರಮ ನಡೆಯುತ್ತಿತ್ತು. ಮೊದಲು ಕೇವಲ ಬೆರಳಣಿಕೆಯುಷ್ಟು ಹುಡುಗರಿಂದ ಪ್ರಾರಂಭವಾದ ಗ್ರಾಮಸೇವಾದಲಕ್ಕೆ ಬರುವ ಮಕ್ಕಳ ಸಂಖ್ಯೆ ೧೦೦ ಸಂಖ್ಯೆಯತ್ತ ಧಾವಿಸುತ್ತಿತ್ತು ಸೇವಾದಲದಲ್ಲಿ ಅನೇಕ ಪ್ರಕಾರದ ಸಾಮೂಹಿಕ ಆಟಗಳು, ದೇಶಭಕ್ತಿಗೀತೆಗಳು, ಇತ್ಯಾದಿಗಳನ್ನು ನಡೆಸಲಾಗುತ್ತಿತ್ತು. ಈ ಸೇವಾದಲದ ಕಾರಣದಿಂದ ಊರಿನ ಮಕ್ಕಳ ನಿಕಟ ಪರಿಚಯವಾಯಿತು. ಅವರ ಮೂಲಕ ಶಾಲಾ ಉಪಾಧ್ಯಾಯರ ಮತ್ತು ತಂದೆ–ತಾಯಿಗಳ ಪರಿಚಯವೂ ತಕ್ಕಮಟ್ಟಿಗೆ ಆಯಿತು. ಆಗ ಸೇವಾದಲಕ್ಕೆ ಬರುತ್ತಿದ್ದ ಮಕ್ಕಳು ಈಗ ದೊಡ್ಡವರಾಗಿ ಅನೇಕ ಹುದ್ದೆಗಳಲ್ಲಿ ಇದ್ದಾರೆ. ಅವರೇ ಸ್ವತಃ ಈಗ ವಯಸ್ಸಿನಲ್ಲಿ ಹಿರಿಯರಾಗಿ .ಸಂಸಾರವಂದಿಗರಾಗಿದ್ದರೂ ಸೇವಾದಲದ ತಮ್ಮ ಅನುಭವವನ್ನು ಮರೆತಿಲ್ಲ. ಸೇವಾದಲ ನಡೆಯುತ್ತಿದ್ದ ಸ್ಥಳ ಈಗ ಜನಪದ ಸೇವಾ ಟ್ರಸ್ಟಿನ ಆಶ್ರಯದಲ್ಲಿರುವ ಮಕ್ಕಳ ಕ್ರೀಡಾಸ್ಥಳವಾಗಿದೆ. ಮತ್ತು ಸಾರ್ವಜನಿಕ ಸಭೆಗಳು ನಡೆಯುವ ಸ್ಥಳವಾಗಿದೆ. ಭಕ್ತ ಮಂಡಳಿಯ ಸಂಸ್ಥಾಪಕರಾಗಿದ್ದ ಶ್ಯಾಮಲಯ್ಯಂಗಾರರು ಇದೇ ಸ್ಥಳದಲ್ಲಿ ಕೆಲವು ಗ್ರಾಮೋದ್ಯೋಗಗಳನ್ನು ನಡೆಸುತ್ತಿದ್ದರು. ೧೯೬೦ರಲ್ಲಿ ಇದೇ ಸ್ಥಳದಲ್ಲಿ ವೈರಮುಡಿ ಜಾತ್ರೆಯ ಸಂದರ್ಭದಲ್ಲಿ ಖಾದಿ ಗ್ರಾಮೋದ್ಯೋಗದ ಪ್ರದರ್ಶನವನ್ನು ಏರ್ಪಡಿಸಿದೆ. ಆಗ ಖಾದಿ ಮಂಡಳಿಯ ಸದಸ್ಯರಾಗಿದ್ದ ನಾಗಮಂಗಲದ ಎಂ.ಆರ್.ಎನ್. ಶಾಸ್ತ್ರಿಯವರು ಈ ಪ್ರದರ್ಶನಕ್ಕೆ ಅಗತ್ಯವಾಗಿದ್ದ ೧೦೦೦/– ರೂಗಳ ಅನುದಾನವನ್ನು ಮಂಜೂರು ಮಾಡಿಸಿಕೊಟ್ಟಿದ್ದರು. ಪ್ರದರ್ಶನದ ಉದ್ಘಾಟನೆಯನ್ನು ಮಂಡಳಿಯ ಅಧ್ಯಕ್ಷರಾಗಿದ್ದ ಸಿದ್ದವೀರಪ್ಪನವರು ಮಾಡಿದ್ದರು. ಒಂದು ದಿನ ಭಾಷಣ ಮಾಡಲು ಮೈಸೂರಿನಿಂದ ದರ್ಶನಶಾಸ್ತ್ರದ ಪ್ರೊಫೆಸರ್ ಎಮ್. ಯಾಮುನಾಚಾರ್ಯರು ಬಂದಿದ್ದರು. ಅವರು ಡಾ।। ಸರ್ವಪಲ್ಲಿ ರಾಧಾ ಕೃಷ್ಣನ್ ರವರ ವಿದ್ಯಾರ್ಥಿಯಾಗಿದ್ದರು. ಅವರೊಂದಿಗೆ ಗಾಂಧೀ ಗ್ರಂಥಮಾಲೆಯ ಕೆ. ಎಸ್. ನಾರಾಯಣ ಸ್ವಾಮಿ ಮತ್ತು ಜಿ. ವಿ. ನಾರಾಯಣ ಮೂರ್ತಿ ಸಹ ಬಂದಿದ್ದರು. ಮೇಲುಕೋಟೆಯ ವೈರಮುಡಿ ಸಮಯದಲ್ಲಿ ಇದೇ ಪ್ರಪ್ರಥಮ ಖಾದಿ ಗ್ರಾಮೋದ್ಯೋಗದ ಸಾರ್ವಜನಿಕ ಪ್ರದರ್ಶನವಾಗಿತ್ತು...............

(ಮುಂದುವರೆಯುವುದು..)

ಗಾಂಧೀಜಿಯವರ ಸಾಬರಮತಿಆಶ್ರಮದ ಜೀವನ ಚಕ್ರ
ಹಾಗೂ
ರಾಷ್ಟ್ರ ನಿರ್ಮಾಣಕ್ಕಾಗಿರಚನಾತ್ಮಕ ಕಾರ್ಯಕ್ರಮ



ಸನ್ಮಾನ್ಯರಿಂದ

ಪತ್ರಿಕೆ ತುಂಬಾ ಉಪಯುಕ್ತವಾದ ಲೇಖನಗಳಿಂದ ಹೊರಬರುತ್ತಿದೆ. ಅನೇಕ ವಿಚಾರಗಳು ಇಂದಿನ ಯುವ ಜನಾಂಗಕ್ಕೆ ಮಾರ್ಗದರ್ಶನ ನೀಡುವಂತಿರುತ್ತವೆ.

ತಮ್ಮ ಶ್ರಮ ಸಾರ್ಥಕವಾಗಲಿ ಎಂದು ಆಶಿಸುತ್ತೇನೆ.

-ಶ್ರೀ ಹೆಚ್. ಆರ್. ದಾಸೇಗೌಡ,
ಬೆಂಗಳೂರು.

ಜನಪದ ವಿಚಾರ ಉತ್ತಮ ಪತ್ರಿಕೆ. ನಾನು ಅದರ ಅಭಿಮಾನಿ. ನಾನು ಬದುಕಿರುವ ತನಕ ಅದರ ಓದುಗ.

-ಪ್ರೊ|| ಹೆಚ್.ಎಸ್.ಮುದ್ದೇಗೌಡ,
ಮಂಡ್ಯ.

ಮರುನಿರ್ದೇಶಿತವಾಗಿ ಪತ್ರಿಕೆ ಬಹಳ ಮಟ್ಟಿಗೆ ಬರುತ್ತಿದೆ. ನಿಮ್ಮ ಪ್ರಯತ್ನಕ್ಕೆ ವಂದನೆಗಳು. ಪತ್ರಿಕೆ ಚೆನ್ನಾಗಿ ಬರುತ್ತಿದೆ.

-ಶ್ರೀ ಎಲ್. ನರಸಿಂಹಯ್ಯ,
ತುಮಕೂರು.

ಜನಪದ ವಿಚಾರದಲ್ಲಿ ಲೇಖನಗಳು ಚೆನ್ನಾಗಿ ಮೂಡಿ ಬರುತ್ತಿವೆ. ನೌಖಾಲಿಯ ವಿಚಾರವನ್ನು ನಮ್ಮ ಸ್ಮೃತಿಗೆ ತಂದದ್ದು ಬಹಳ ಸಮಂಜಸ. ಹಾಗೆಯೇ ಜಿ.ಟಿ.ನಾರಾಯಣರಾವ್‌ರವರ ಫಲಜೋತಿಷ ವಿಚಾರ ಸಮಾಜದ ಮೂಢ ನಂಬಿಕೆಗಳನ್ನು ಓಡಿಸುವ ದಿಕ್ಕಿನಲ್ಲಿ ಮಾರ್ಗದರ್ಶಕವಾಗಿದೆ. ಅಮೇರಿಕಾದ ಭಯೋತ್ಪಾದಕತೆಯ ರುದ್ರಸ್ವರೂಪ ದರ್ಶನ ಮಾಡಿಸಿದ್ದೀರಿ. ವಿಚಾರದೀಪ್ತಿಯಲ್ಲಿ ರುಂಡ-ಮುಂಡ ಶಬ್ದ ಅದಲುಬದಲಾಗಿದೆ. ಶ್ರೀ ಶರ್ಮರ ಶತಮಾನೋತ್ಸವ ಸಂದರ್ಭದಲ್ಲಿ ಪೂಜ್ಯರನ್ನು ಜ್ಞಾಪಿಸಿದ್ದು ಸಂದರ್ಭೋಚಿತವಾಗಿದೆ. ನಳಂದವಿಚಾರ ನಮ್ಮ ಸ್ಮೃತಿಯಿಂದ ದೂರವಾಗದಂತೆ ಜ್ಞಾಪಿಸಿದ್ದೀರಿ. ಶಿಕ್ಷಕರ ದಿನಾಚರಣೆ ಕೇವಲ ಪೂಜೆಯಾಗಬಾರದು ವಿಚಾರ ಪೂರಕವಾಗಿರಬೇಕು. ತಮ್ಮ ಪತ್ರಿಕೆಯು ಪ್ರಗತಿ ಪಥದಲ್ಲಿ ನಡೆದು ಜನಪದಕ್ಕೆ ಮಾರ್ಗದರ್ಶಕವಾಗಲಿ ಎಂದು ಆಶಿಸುತ್ತೇನೆ.

-ಜಿ. ಎಂ. ಮಲ್ಲೇಶ್, ಸುಂಕದಕಟ್ಟೆ.

ಡೈಜೆಸ್ಟ್ ಚೆನ್ನಾಗಿ ಬರುತ್ತಿದೆ.

-ಭೀಮಸಿಂಗ್‌ಗೌಗಿ, ಬಳ್ಳಾರಿ.

ಜನಪದ ವಿಚಾರ ಕ್ಲುಪ್ತವಾಗಿ ತಲುಪುತ್ತಿದೆ. ನಿಮ್ಮ ಜೀವನ ಚರಿತ್ರೆ, ಬೇರೆ ಬೇರೆ ಲೇಖನಗಳು ಉತ್ಕೃಷ್ಟವಾಗಿವೆ.

-ಡಾ|| ಎಂ.ಜಿ. ಬಸವರಾಜ್,
ಮೈಸೂರು.

ವಿಧವಾ ವಿವಾಹ ಪ್ರವರ್ತಕ ಗಡಿಯಾರಂ ರಾಮಕೃಷ್ಣ ಶರ್ಮರನ್ನು ಪರಿಚಯಿಸಿದ ಕೆ.ಆರ್.ಮೋಹನರವರಿಗೂ, ಅದನ್ನು ಪ್ರಕಟಿಸಿದ ತಮಗೂ ನನ್ನ ವಂದನೆಗಳು ನುಡಿದಂತೆ ನಡೆದು ವಿಧವಾ ವಿವಾಹವಾಗಿ ನಡೆದಂತೆ ನುಡಿಯುವ ಹಕ್ಕನ್ನು ಪಡೆದ ರಾಮಕೃಷ್ಣಶರ್ಮರಿಗೆ ನನ್ನ ಮನತುಂಬಿದ ನಮನಗಳು. ಶಿಕ್ಷಕರ ದಿನಕ್ಕೆ ಸೂಕ್ತವಾದ ಲೇಖನಗಳಿಂದ ತುಂಬಿದೆ ಈ ಸಲದ ಜನಪದ ವಿಚಾರ.

-ಜಿ.ವೈದೇಹಿ, ಮೈಸೂರು.

ಅಕ್ಟೋಬರ್ ಮಾಹೆಯ ಮಹತಿ ಹೆಚ್ಚಿಸಿದವರು

೧. ಆಲ್ಫ್ರೆಡ್ ನೊಬೆಲ್	೨೧-೧೦-೧೮೩೩
೨. ಅನಿ ಬೆಸೆಂಟ್	೦೧-೧೦-೧೮೪೭
೩. ಮಹಾತ್ಮ ಗಾಂಧೀ	೦೨-೧೦-೧೮೬೯
೪. ಸರ್ದಾರ್ ವಲ್ಲಭಬಾಯಿ ಪಟೇಲ್	೦೩-೧೦-೧೮೭೭
೫. ಶಿವರಾಮ ಕಾರಂತ್	೧೦-೧೦-೧೯೦೨
೬. ಜಯಪ್ರಕಾಶ್ ನಾರಾಯಣ್	೨೧-೧೦-೧೯೦೨
೭. ಲಾಲ್ ಬಹದ್ದೂರ್ ಶಾಸ್ತ್ರಿ	೦೨-೧೦-೧೯೦೪



KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com